ಅಹರ್ನಿಶಂ ಜಾಗರಣೀಯಂ ಲೋಕಹಿತಂ ಮಮ ಕರಣೀಯಂ

# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ



**ಗುಜರಾತ್:** ಅಹಮ್ಮದಾಬಾದ್‌ನಲ್ಲಿ ಸಂಭವಿಸಿದ ಏರ್ ಇಂಡಿಯಾ ವಿಮಾನ ದುರಂತದ ಸಂದರ್ಭದಲ್ಲಿ ಘಟನಾ ಸ್ಥಳಕ್ಕೆ ಧಾವಿಸಿ ಸೇವಾ ಚಟುವಟಿಕೆಯಲ್ಲಿ ಪಾಲ್ಗೊಂಡ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸ್ವಯಂಸೇವಕರು.

ಸಂಪುಟ : 47 | ಸಂಚಿಕೆ : 05 | ಆಷಾಢ-ಶ್ರಾವಣ | ಕಲಿಯುಗಾಬ್ದ 5127 | 01-07-2025 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4

# ಅರಿವಿನ ವರ ನೀಡುವ, ಗುರುವಿನ ಮಹತ್ವ ಸಾರುವ ಗುರುಪೂರ್ಣಿಮೆ

**ಅಖಂಡ ಮಂಡಲಾಕಾರಂ ವ್ಯಾಪ್ತಂ ಯೇನ ಚರಾಚರಂ ।**
**ತತ್ಪದಂ ದರ್ಶಿತಂ ಯೇನ ತಸ್ಮೈ ಶ್ರೀಗುರುವೇ ನಮಃ ॥**

ಅವಿಭಾಜ್ಯ, ಅನಂತ, ಕಾಲಾತೀತ, ದೈವಿಕ ಮತ್ತು ಇಡೀ ವಿಶ್ವವನ್ನು ವ್ಯಾಪಿಸಿರುವ ಸತ್ವವನ್ನು ನನಗೆ ಬಹಿರಂಗಪಡಿಸಿದ ಗುರುವಿಗೆ ನಮನ ಎನ್ನುವುದು ಈ ಮೇಲಿನ ಶ್ಲೋಕದ ಅರ್ಥ. ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲೂ 'ಗುರು' ಅತ್ಯಂತ ಮಹತ್ವದ ಪಾತ್ರವನ್ನು ವಹಿಸುವವನು ಗುರು. ಆ ಹಿನ್ನೆಲೆಯಲ್ಲಿಯೇ ರಾಷ್ಟ್ರಕವಿ ಕುವೆಂಪು ಅವರು ಕೂಡ 'ಮುಂದೆ ಗುರಿಯಿರಬೇಕು, ಹಿಂದೆ ಗುರುವಿರಬೇಕು' ಎಂದು ಹೇಳಿದ್ದಾರೆ. ಭಾರತೀಯ ಪರಂಪರೆಯಲ್ಲಿ 'ಗುರು'ವಿಗೆ ವಿಶೇಷವಾದ ಸ್ಥಾನಮಾನವನ್ನು ನೀಡಿದ್ದೇವೆ. 'ಗುರುವಿನ ಗುಲಾಮನಾಗುವತನಕ ದೊರೆಯದಣ್ಣ ಮುಕುತಿ' ಎಂದು ದಾಸಶ್ರೇಷ್ಠರು ತಿಳಿಸಿದ್ದಾರೆ.

ಗುರು: ಹಿಂದು ಸಂಸ್ಕೃತಿಯಲ್ಲಿ ಗುರುವಿನ ಸ್ಥಾನ ಮಹತ್ವದ್ದು. ಗುರು ಪದದ ಅರ್ಥವೇ ಮಹಾನ್ ಎಂದು. ಹಾಗಾಗಿ ಗುರುವನ್ನು ಭಗವಂತನಿಗೆ ಸಮಾನ ಎಂದು ನಮ್ಮ ಪೂರ್ವಜರು ಭಾವಿಸಿ, ಗುರುವಿನಲ್ಲಿ ಬ್ರಹ್ಮ, ವಿಷ್ಣು ಮಹೇಶ್ವರರನ್ನು ಕಂಡಿದ್ದಾರೆ. ವ್ಯಕ್ತಿಯ ಜೀವನದಲ್ಲಿನ ಕತ್ತಲೆಯನ್ನು ತೊಡೆದುಹಾಕುವವನು ಗುರು, ಜ್ಞಾನವೆಂಬ ಔಷಧಿಯಿಂದ ಅಜ್ಞಾನವನ್ನು ಹೋಗಲಾಡಿಸುವವನೇ ಗುರು – ಹೀಗೆ ನಮ್ಮ ಪೂರ್ವಜರು ಗುರುವನ್ನು ವರ್ಣಿಸಿದ್ದಾರೆ. ಆಕಸ್ಮಿಕ ಮರಣ ಮತ್ತು ನಿಶ್ಚಿತ ಮರಣದ ಮಧ್ಯದ ಬದುಕನ್ನು ಶ್ರೇಷ್ಠವಾಗಿಸಲು ವ್ಯಕ್ತಿಯ ಬದುಕಿನಲ್ಲಿ ಗುರಿ ಇರಬೇಕು. ಹಾಗೆಯೇ ಗುರಿಯ ಕಡೆಗೆ ಸರಿಯಾದ ದಾರಿಯಲ್ಲಿ ಮುನ್ನಡೆಸಲು ಗುರು ಅವಶ್ಯಕ.

ವ್ಯಾಸಪೂರ್ಣಿಮೆ: ಆಷಾಢ ಮಾಸದ ಹುಣ್ಣಿಮೆ ಕೃಷ್ಣದ್ವೈಪಾಯನರ ಜನ್ಮದಿನ. ತಮ್ಮ ಅಪಾರ ಜ್ಞಾನದಿಂದ ಮಹಾಭಾರತ, ಭಗವದ್ಗೀತೆಯ ಕರ್ತೃ ಆದರು. ವೇದಗಳನ್ನು ವರ್ಗೀಕರಿಸಿ 'ವೇದವ್ಯಾಸ'ರಾಗಿ ಪ್ರಖ್ಯಾತರಾದರು. ಆದಿಗುರು ಎಂದು ಕರೆಯಲ್ಪಡುವ ವೇದವ್ಯಾಸರ ಜನ್ಮದಿನವನ್ನು ಶ್ರೀಗುರುಪೂರ್ಣಿಮೆಯಾಗಿ ಆಚರಿಸುವುದು ಹಿಂದು ಸಮಾಜದಲ್ಲಿ ಅನಾದಿ ಕಾಲದಿಂದಲೂ ನಡೆದು ಬಂದ ಪದ್ಧತಿ. ಸಪ್ತಚಿರಂಜೀವಿಗಳಲ್ಲಿ ಒಬ್ಬರು ಎಂದು ಗುರುತಿಸಲ್ಪಡುವ ವೇದವ್ಯಾಸರು ಪುರಾಣಗಳನ್ನು, ಬ್ರಹ್ಮಸೂತ್ರಗಳನ್ನು ರಚಿಸಿ ಭಾರತದ ಭವ್ಯ ಜ್ಞಾನ ಸಂಪತ್ತಿಗೆ ಅತ್ಯದ್ಭುತ ಕೊಡುಗೆ ನೀಡಿದವರು.

ಭಗವಾಧ್ವಜ ನಮ್ಮ ಗುರು: ವ್ಯಕ್ತಿಯ ಬದುಕಿನಲ್ಲಿ ಹೇಗೆ ಗುರು ಅವಶ್ಯಕವೋ ಅಂತೆಯೇ ಸಂಘಟನೆಗೂ ಗುರುವಿನ ಅವಶ್ಯಕತೆ ಇದೆ ಎಂಬುದನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸ್ಥಾಪಕ ಡಾ. ಹೆಡಗೇವಾರ್ ಮನಗಂಡರು. ಸಂಘದಲ್ಲಿ ವ್ಯಕ್ತಿ ನಿಷ್ಠೆಯಿಲ್ಲ, ತತ್ವನಿಷ್ಠೆ ಇದೆ. ಸಂಘಕಾರ್ಯ ಸಮಸ್ತ ಸಮಾಜದ ಸರ್ವಾಂಗೀಣ ಉನ್ನತಿಯ ಮಹತ್ತರ ಕಾರ್ಯ. ಇದು ಒಬ್ಬ ವ್ಯಕ್ತಿಯ ಜೀವಿತಾವಧಿಯಲ್ಲಿ ಆಗುವಂತಹುದಲ್ಲ. ನಿರಂತರ ಕಾರ್ಯಕ್ಕೆ ನಿರಂತರ ಪ್ರೇರಣೆ ನೀಡುವ ಗುರು ಅವಶ್ಯ. ವ್ಯಕ್ತಿ ಪರಿಪೂರ್ಣನಲ್ಲ; ಶಾಶ್ವತನಲ್ಲ. ಹಾಗಾಗಿ ನಮ್ಮ ಧರ್ಮ, ಸಂಸ್ಕೃತಿ, ಪರಂಪರೆಯನ್ನು ಪ್ರತಿನಿಧಿಸುವ ಭಗವಾಧ್ವಜವೇ ನಮಗೆ ಗುರುವಿನ ಸ್ಥಾನದಲ್ಲಿದೆ.

ಮೂರ್ತರೂಪದ ಬಟ್ಟೆಯ ಧ್ವಜದಲ್ಲಿ ಅಡಕವಾಗಿರುವುದು ಅಮೂರ್ತ ತತ್ವಗಳು. ಹೇಗೆ ನೀರಿಗೆ ಶ್ರದ್ಧೆಯನ್ನು ಜೋಡಿಸಿದಾಗ ತೀರ್ಥವಾಗುವುದೋ, ಆಹಾರಕ್ಕೆ ಶ್ರದ್ಧೆಯನ್ನು ಜೋಡಿಸಿದಾಗ ನೈವೇದ್ಯವಾಗುವುದೋ, ಅಂತೆಯೇ ಬರಿಗಣ್ಣಿನಿಂದ ಕಾಣುವುದು ಬಟ್ಟೆಯ ತುಂಡಾದರೂ ಶ್ರದ್ಧೆ, ಭಕ್ತಿಯಿಂದ ಕಂಡಾಗ ಭಗವಾಧ್ವಜದಲ್ಲಿ ಗುರುವನ್ನು ಕಾಣಬಹುದು.



**ಜ್ಞಾನ:** ಕತ್ತಲೆ ಕಳೆದು ಬೆಳಕು ಹರಿಯುವಾಗಿನ ಅರುಣೋದಯದ, ಜ್ಞಾನೋದಯದ ಸಂಕೇತ ಅರುಣ ವರ್ಣ ಭಗವೆಯದ್ದು. ಭಗವೆಯನ್ನು ಕಂಡಾಗ ಜಗತ್ತಿಗೆ ಜ್ಞಾನಸುಧೆಯನ್ನು ಹರಿಸಿದ ಪುಣ್ಯಭೂಮಿ ಭಾರತದ ಜ್ಞಾನದ ಪರಂಪರೆ ನಮಗೆ ನೆನಪಾಗಬೇಕು.

**ಶೌರ್ಯ:** ಹಿಂದು ಸಮಾಜದ ಮೇಲೆ ಸಹಸ್ರಾರು ವರ್ಷಗಳ ಕಾಲದಿಂದ ನಿರಂತರ ಆಕ್ರಮಣ ನಡೆದಿದೆ. ಆ ಎಲ್ಲಾ ಆಕ್ರಮಣಗಳನ್ನು ಸಮರ್ಥವಾಗಿ ಎದುರಿಸಿದ ಶೌರ್ಯದ ಪರಂಪರೆ ನಮ್ಮದು. ನಮ್ಮೆಲ್ಲಾ ವೀರ ಮಹಾಪುರುಷರಿಗೆ ಪ್ರೇರಣೆ ನೀಡಿದ ಧ್ವಜ ಭಗವಾಧ್ವಜ. ನಮ್ಮ ಪುರಾಣಗಳಲ್ಲಿ ಧರ್ಮಧ್ವಜವಾಗಿ ಮೆರೆದ ಭಗವೆಯನ್ನೇ, ಇತಿಹಾಸದಲ್ಲಿ ನಮ್ಮೆಲ್ಲಾ ಹಿಂದು ವೀರರು ಉಪಯೋಗಿಸಿದ್ದು ಮತ್ತು ಅದರಿಂದಲೇ ಪ್ರೇರಣೆ ಪಡೆದಿದ್ದು. ಭಗವಾಧ್ವಜವನ್ನು ಕಂಡಾಗ ಭಾರತದ ಶೌರ್ಯದ ಪರಂಪರೆ ನೆನಪಾಗಬೇಕು.

**ತ್ಯಾಗ:** ತ್ಯಾಗಕ್ಕೆ ನಮ್ಮ ಸಂಸ್ಕೃತಿಯಲ್ಲಿ ಮಹತ್ವದ ಸ್ಥಾನ, ಸರ್ವಸಂಗ ಪರಿತ್ಯಾಗಿಗಳಾಗಿ ಅಧ್ಯಯನ, ಅಧ್ಯಾಪನ ಮಾಡುತ್ತಾ ಸಮಾಜದ ಹಿತಚಿಂತನೆ ಮಾಡುವ ಸನ್ಯಾಸಿ ಪರಂಪರೆಯ ಸಂಕೇತ ಭಗವಾಧ್ವಜ. ತ್ಯಾಗ, ಬಲಿದಾನಗಳಿಂದ ನಮ್ಮ ಸಂಸ್ಕೃತಿಯನ್ನು ಸಂರಕ್ಷಿಸಿದ ಶೂರ-ವೀರರ, ಮಹಾತ್ಮರ ಪರಂಪರೆ ನೆನಪಿಸುವ ಸಂಕೇತ ಭಗವಾಧ್ವಜ. ಹಾಗಾಗಿ ನಮ್ಮ ಸಂಸ್ಕೃತಿಯ ಪುನರುಜ್ಜೀವನಕ್ಕೆ ಕಟಿಬದ್ಧವಾದ ಸಂಘಕಾರ್ಯಕ್ಕೆ ಗುರುವಿನ ಸ್ಥಾನದಲ್ಲಿರುವ ಭಗವಾಧ್ವಜವೇ ನಮಗೆ ಪ್ರೇರಕ ಶಕ್ತಿ.

**ಸಮರ್ಪಣೆ:** ವಜ್ರಾಯುಧಕ್ಕಾಗಿ ತನ್ನ ಬೆನ್ನುಮೂಳೆಯನ್ನೇ ಸಮರ್ಪಿಸಿದ ದಧೀಚಿ, ಪುಟ್ಟ ಹಕ್ಕಿಯ ಪ್ರಾಣ ಉಳಿಸಲು ತನ್ನ ಶರೀರದ ಭಾಗಗಳನ್ನೇ ಕತ್ತರಿಸಿ, ಅದೂ ಸಾಲದಾದಾಗ ತನ್ನನ್ನೇ ಸಮರ್ಪಿಸಿಕೊಂಡ ಶಿಬಿ ಚಕ್ರವರ್ತಿ ಇತ್ಯಾದಿ ಸಮಾಜಹಿತಕ್ಕೆ ಸಮರ್ಪಣೆ ಮಾಡಿದ ಉದಾಹರಣೆಗಳೇ ನಮಗೆ ಪ್ರೇರಣೆ. ಯಜ್ಞದಲ್ಲಿ ನಾವು ಶ್ರೀಗಂಧ, ತುಪ್ಪ, ರೇಶಿಮೆ ಮುಂತಾದ ಶ್ರೇಷ್ಠವಾದ ವಸ್ತುಗಳನ್ನೇ ಅರ್ಪಿಸುತ್ತೇವೆ. ಹಾಗೆಯೇ ಸಮಾಜದ ಕೆಲಸಕ್ಕೆ ನಮ್ಮಲ್ಲಿನ ಶ್ರೇಷ್ಠ ಸಂಗತಿಗಳನ್ನು ಅರ್ಪಿಸಬೇಕು. ಅಗ್ನಿ ಹೇಗೆ ಲೋಹಗಳನ್ನು ಕರಗಿಸಿ ಶುದ್ಧೀಕರಿಸುತ್ತದೋ ಹಾಗೆಯೇ ಈ ಸಮಾಜದೇವನಲ್ಲಿ ನಮ್ಮೆಲ್ಲಾ ಕೆಟ್ಟಗುಣಗಳೂ ನಾಶವಾಗಿ ನಾವು ಸದ್ಗುಣಿಗಳಾಗುತ್ತೇವೆ.

**ಗುರುಪೂಜೆ:** ಹೂ-ಹಣ್ಣು, ದೀಪ-ಧೂಪ-ನೈವೇದ್ಯ, ಆರತಿ, ಮಂತ್ರ-ತಂತ್ರ ಇತ್ಯಾದಿಗಳಿಂದ ಮಾಡುವ ಪೂಜೆ – ಬಾಹ್ಯ ಪೂಜೆ. ನಾವೂ ಸದ್ಗುಣಗಳನ್ನು ಮೈಗೂಡಿಸಿಕೊಂಡು, ಪರಹಿತಕ್ಕಾಗಿ ಬದುಕುತ್ತಾ ದೇವರಂತೆಯೇ ಆಗಲು ಯತ್ನಿಸುವುದೇ ನಿಜವಾದ ದೇವರ ಪೂಜೆ. ಸಂಘದ ಕೆಲಸ ಮಾಡುತ್ತಾ ನಾವು ಮಾಡುವ ಸತತ ಸಾಧನೆ, ಸಮಾಜ ಹಿತಕ್ಕಾಗಿ ನಮ್ಮದೆಲ್ಲವನ್ನೂ ಸಮರ್ಪಿಸುವುದು – ಇದುವೇ ನಿಜವಾದ ಗುರುಪೂಜೆ.

**ಗುರುದಕ್ಷಿಣೆ:** ಸಂಘ ಒಂದು ಕುಟುಂಬವಿದ್ದಂತೆ. ಕುಟುಂಬದ ಎಲ್ಲ ಅವಶ್ಯಕತೆಗಳು ಕುಟುಂಬದ ಸದಸ್ಯರಿಂದಲೇ ಪೂರೈಕೆಯಾಗುತ್ತವೆ. ಸಂಘಕಾರ್ಯಕ್ಕೆ ಅವಶ್ಯವಿರುವ ಆರ್ಥಿಕ ಸಂಪನ್ಮೂಲವೂ ಸ್ವಯಂಸೇವಕರಿಂದಲೇ ಆಗಬೇಕಾದುದು ಸಹಜ. ಸಂಘದ ಗುರುಪೂಜೆ ಉತ್ಸವದಲ್ಲಿ ಸ್ವಯಂಸೇವಕರು ಮಾಡುವ ಗುರುದಕ್ಷಿಣೆಯ ಅರ್ಪಣೆ ಇದಕ್ಕೆ ಪೂರಕ. ಗುರುದಕ್ಷಿಣೆ ವಂತಿಗೆಯಲ್ಲ, ದೇಣಿಗೆಯಲ್ಲ, ಕಾಣಿಕೆಯಲ್ಲ. ನಮ್ಮ ಸಂಪಾದನೆಯ ಒಂದು ಭಾಗವನ್ನು ಸಮಾಜಕ್ಕೆ ಮೀಸಲಿಟ್ಟು ಭಗವಾಧ್ವಜದ ಸಮಕ್ಷಮದಲ್ಲಿ ಗುರುದಕ್ಷಿಣೆಯಾಗಿ ಸಮರ್ಪಿಸುತ್ತಿದ್ದೇವೆ. ಇದು ಯಜ್ಞಕ್ಕೆ ಸಮರ್ಪಿಸುವ ಹವಿಸ್ಸಿನಂತೆ – "ರಾಷ್ಟ್ರಾಯ ಸ್ವಾಹಾ, ಇದಂ ನ ಮಮ" (ರಾಷ್ಟ್ರಕ್ಕೆ ಸಮರ್ಪಿಸುತ್ತಿದ್ದೇನೆ, ಇದು ನನ್ನದಲ್ಲ). ನಮ್ಮ ಸಂಪಾದನೆ ನಾವು ಸಮಾಜದಿಂದ ಪಡೆದಿರುವುದು. ನಮ್ಮ ಅವಶ್ಯಕತೆಗಳ ಪೂರೈಕೆಗೆ ಬೇಕಾಗುವಷ್ಟು ಮಾತ್ರ ನಮ್ಮದು. ಉಳಿದದ್ದೆಲ್ಲ ವಾಸ್ತವವಾಗಿ ಸಮಾಜದ್ದೇ, ಸಮಾಜಕ್ಕೆ ಸಲ್ಲಬೇಕು.

**ಸಂಘ ಕಾರ್ಯ:** ವ್ಯಕ್ತಿ ನಿರ್ಮಾಣದಿಂದ ರಾಷ್ಟ್ರನಿರ್ಮಾಣ – ಈ ಕಲ್ಪನೆಯೊಂದಿಗೆ ಕಾರ್ಯ ಮಾಡುತ್ತಿರುವ ಸಂಘದ ಶಾಖೆ 60 ಸಾವಿರಕ್ಕೂ ಹೆಚ್ಚು ಗ್ರಾಮಗಳಲ್ಲಿ ನಡೆಯುತ್ತಿದೆ. ಶಾಖೆಯಲ್ಲಿ ನಿರ್ಮಾಣಗೊಂಡ ಸ್ವಯಂಸೇವಕರು ಸಮಾಜದ ವಿವಿಧ ಕ್ಷೇತ್ರಗಳಲ್ಲಿ ವ್ಯವಸ್ಥಾ ಪರಿವರ್ತನೆಯಲ್ಲಿ ತೊಡಗಿಕೊಂಡಿದ್ದಾರೆ. ಸೇವಾ ಉಪಕ್ರಮಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಸಮಾಜ ಪರಿವರ್ತನೆಯ ದೃಷ್ಟಿಯಿಂದ ಧರ್ಮಜಾಗರಣ, ಕುಟುಂಬ ಪ್ರಬೋಧನ್, ಸಾಮರಸ್ಯ, ಗ್ರಾಮವಿಕಾಸ, ಗೋಸೇವೆ, ಪರ್ಯಾವರಣದ ಕಾರ್ಯಕ್ಕೆ ಸಂಘದ ಸ್ವಯಂಸೇವಕರು, ಸಮಾಜವನ್ನು ಜೋಡಿಸಿಕೊಂಡು ಕೆಲಸ ಮಾಡುತ್ತಿದ್ದಾರೆ.

**ಸಮಯ ಸಮರ್ಪಣೆ:** ಸಂಘಕ್ಕೆ 100 ವರ್ಷಗಳು ತುಂಬುವ ಈ ಅಮೃತಕಾಲದಲ್ಲಿ ಭಾರತವು ವೈಶ್ವಿಕ ನೇತೃತ್ವವನ್ನು ಕೊಡುವಂತಾಗಲು ಸಂಘಟಿತ ಪ್ರಯತ್ನ ಮಾಡಬೇಕಾಗಿದೆ. ಹಿಂದು ಧರ್ಮ, ಸಂಸ್ಕೃತಿ, ಸಮಾಜಯ ರಕ್ಷಣೆಯ ಮೂಲಕ ಹಿಂದುರಾಷ್ಟ್ರದ ಸರ್ವಾಂಗೀಣ ಉನ್ನತಿಯ ಕಾರ್ಯ ಮಾಡಬೇಕಾಗಿದೆ. ಸಮಾಜ ಪರಿವರ್ತನೆಯ ಕಾರ್ಯ ನನ್ನಿಂದ, ನನ್ನ ಮನೆಯಿಂದ, ನನ್ನ ಪರಿಸರದಲ್ಲಿ ಆಗುವಂತೆ ಪ್ರಯತ್ನ ಆಗಬೇಕಾಗಿದೆ. ಪಂಚ ಪರಿವರ್ತನೆಗಳಾದ ಕುಟುಂಬ ಪ್ರಬೋಧನ, ಸಾಮರಸ್ಯ, ಪರ್ಯಾವರಣ, ಸ್ವದೇಶಿ ಜೀವನಶೈಲಿ, ನಾಗರಿಕ ಕರ್ತವ್ಯ – ನನ್ನಿಂದ ಆರಂಭಗೊಂಡು, ನನ್ನ ಮನೆಯಲ್ಲಿ ಅನುಷ್ಠಾನ, ನನ್ನ ಪ್ರಯತ್ನದಿಂದ ನನ್ನ ಮನೆಯ ಸುತ್ತಲಿನ ಹತ್ತು ಮನೆಗಳಲ್ಲಿ ಪರಿವರ್ತನೆಯನ್ನು ತರುವುದರ ಮೂಲಕ ಸಮಾಜ ಪರಿವರ್ತನೆಯ ಕಾರ್ಯಕ್ಕೆ ಸಮಯ ನೀಡಬೇಕಾಗಿದೆ. ರಾಷ್ಟ್ರಸೇವೆಯ ಈ ಪುಣ್ಯ ಕಾರ್ಯದಲ್ಲಿ ಎಲ್ಲರೂ ಸ್ವಲ್ಪ ಸಮಯವನ್ನು, ಹಲವರು ಹೆಚ್ಚು ಸಮಯವನ್ನು, ಕೆಲವರು ಪೂರ್ಣ ಸಮಯವನ್ನು ನೀಡಬೇಕಾಗಿದೆ. ಎಲ್ಲರಿಗೂ ಗುರುವಿನ ಸ್ಥಾನದಲ್ಲಿ ನಿಂತು ಪ್ರೇರಣೆ ತುಂಬುವ ಕೆಲಸವನ್ನು ಭಗವಾಧ್ವಜ ನಿರಂತರವಾಗಿ ಮಾಡಿಕೊಂಡು ಬರುತ್ತಿದೆ.

## ಸಂಸ್ಮರಣೆ

# ಡಾ. ಗೊರೂರು ರಾಮಸ್ವಾಮಿ ಅಯ್ಯಂಗಾರ್



ಡಾ. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು 1904ರ ಜುಲೈ 4ರಂದು ಹಾಸನ ಜಿಲ್ಲೆಯ ಗೊರೂರು ಗ್ರಾಮದಲ್ಲಿ ಜನಿಸಿದರು. ಅವರ ತಂದೆ ಶ್ರೀನಿವಾಸ ಅಯ್ಯಂಗಾರ್, ತಾಯಿ ಲಕ್ಷಮ್ಮ. ತಮ್ಮ ಹಳ್ಳಿಯಲ್ಲಿ ಲೋಯರ್ ಸೆಕೆಂಡರಿ ಶಿಕ್ಷಣವನ್ನು ಮುಗಿಸಿದ ಗೊರೂರರು ಹಾಸನದ ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಗಾಂಧೀಜಿಯವರ ಅಸಹಕಾರ ಚಳುವಳಿಯಿಂದ ಆಕರ್ಷಿತರಾಗಿ ಶಿಕ್ಷಣಕ್ಕೆ ವಿದಾಯ ಹೇಳಿದರು. ಅನಂತರ ಅವರು ಗಾಂಧೀಜಿಯ ಆಶ್ರಮವನ್ನು ಸೇರಿ, ಗುಜರಾತಿನ ವಿದ್ಯಾಪೀಠದ ವಿದ್ಯಾರ್ಥಿಯಾದರು. ಬಳಿಕ ಮದ್ರಾಸಿನ 'ಲೋಕಮಿತ್ರ' ಮತ್ತು 'ಭಾರತಿ' ಪತ್ರಿಕೆಗಳ ಕನ್ನಡ ಸಮಾಚಾರ ಲೇಖಕರಾಗಿ ಸ್ವಲ್ಪಕಾಲ ಕೆಲಸಮಾಡಿ, ಕೆಂಗೇರಿಯ ಗುರುಕುಲಾಶ್ರಮವನ್ನು ಸೇರಿದರು. ಶೋಷಿತರ ಉದ್ಧಾರ ಅದರ ಮುಖ್ಯ ಕಾರ್ಯವಾಗಿತ್ತು. ಅದನ್ನು ಗೊರೂರರು ಶ್ರದ್ಧೆಯಿಂದ ನಿರ್ವಹಿಸಿದರು.

ಆನಂತರ ಬೆಂಗಳೂರಿನ ಅಖಿಲ ಭಾರತ ಚರಕ ಸಂಘದ ಖಾದಿ ವಸ್ತ್ರಾಲಯದ ಸಂಚಾಲಕರಾದರು. ಅಲ್ಲಿಯೇ ಅವರ ಸಾಹಿತ್ಯ ಸೇವೆ ಮೊದಲಾಯಿತು. 1933ರಲ್ಲಿ ಗೊರೂರರು ತಮ್ಮ ಗ್ರಾಮಕ್ಕೆ ಮರಳಿ, ಮೈಸೂರು ಗ್ರಾಮ ಸೇವಾ ಸಂಘವನ್ನು ಸ್ಥಾಪಿಸಿ, ಖಾದಿ ಪ್ರಚಾರ, ಶೋಷಿತರ ಉದ್ಧಾರ, ವಯಸ್ಕರ ಶಿಕ್ಷಣ, ಗ್ರಾಮ ಕೈಗಾರಿಕೆಗಳು ಮುಂತಾದ ರಚನಾತ್ಮಕ ಚಟುವಟಿಕೆಗಳಲ್ಲಿ ತೊಡಗಿದರು. 1942ರ 'ಚಲೇ ಜಾವ್' ಚಳವಳಿಯಲ್ಲಿ ಅವರು ಭಾಗವಹಿಸಿ, ತುರಂಗವಾಸವನ್ನು ಅನುಭವಿಸಿದರು. ಸ್ವಾತಂತ್ರ್ಯ ಬಂದ ಮೇಲೆ ಮೈಸೂರಿನಲ್ಲಿ ಪ್ರಜಾ ಸರ್ಕಾರ ಸ್ಥಾಪನೆಗಾಗಿ ನಡೆದ ಚಳವಳಿಯಲ್ಲೂ ಭಾಗವಹಿಸಿದರು. ಅದು ಸ್ಥಾಪಿತವಾದ ಮೇಲೆ ಸುಮಾರು ಹನ್ನೆರಡು ವರ್ಷಗಳ ಕಾಲ ರಾಜ್ಯದ ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು.

ಸಾಹಿತ್ಯ ರಶ್ಮಿ, ಹೇಮಾವತಿ ತೀರದಲ್ಲಿ ಮತ್ತು ಇತರ ಪ್ರಬಂಧಗಳು, ಹಳ್ಳಿ ಚಿತ್ರಗಳು, ಬೆಟ್ಟದ ಮನೆಯಲ್ಲಿ ಮತ್ತು ಇತರ ಪ್ರಬಂಧಗಳು, ಗರುಡಗಂಬದ ದಾಸಯ್ಯ, ಕಥೆಗಳು ಮತ್ತು ವಿನೋದ ಚಿತ್ರಗಳು. ಪುನರ್ಜನ್ಮ, ಭಗವಾನ್ ಕೌಟಿಲ್ಯ, ಮಲೆನಾಡವರು, ಮೆರವಣಿಗೆ, ಕ್ರೌಂಚವಧೆ, ರಾಜನರ್ತಕಿ, ಊರ್ವಶಿ, ಹೇಮಾವತಿ ಮೊದಲಾದ ಕಾದಂಬರಿಗಳನ್ನು ಬರೆದಿದ್ದಾರೆ. ಆತ್ಮಕಥೆ, ಕೊನೆಷ್ಟೈ ಕಥೆಗಳು, ಜಗತ್ತಿನ ಮಹದ್ವ್ಯಕ್ತಿಗಳು, ಮಹಾದೇವ ದೇಸಾಯಿಯವರ ಕೃತಿಗಳು, ಸತ್ಯ ಮತ್ತು ಅಹಿಂಸೆ, ಸಾಹಿತ್ಯ ಜೀವಾಳ ಕೃತಿಗಳನ್ನು ಅನುವಾದಿಸಿದ್ದಾರೆ. ಉಸುಬು, ಕನ್ಯಾಕುಮಾರಿ ಮತ್ತು ಇತರ ಕಥೆಗಳು, ಕಮ್ಮಾರ ವೀರಭದ್ರಾಚಾರಿ, ಗೋಪುರದ ಬಾಗಿಲು, ಬೆಸ್ತರ ಕರಿಯ, ವೈಯ್ಯಾರಿ, ಶಿವರಾತ್ರಿ ಹೀಗೆ ಅನೇಕ ಗೊರೂರು ಅವರ ಪುಸ್ತಕಗಳು ಪ್ರಕಟವಾಗಿವೆ.

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾಡಮಿ ಪ್ರಶಸ್ತಿ, ದೇವರಾಜ ಬಹದ್ದೂರ್ ಪ್ರಶಸ್ತಿ, ಮೈಸೂರು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್, ಹೀಗೆ ಅನೇಕ ಪ್ರಮುಖ ಪ್ರಶಸ್ತಿಗಳು, ಪದವಿಗಳು ಅವರನ್ನರಸಿ ಬಂದಿದ್ದವು. ಹಲವಾರು ಕನ್ನಡ ಪ್ರೇಮಿಗಳ ಮನ ಗೆದ್ದಿದ್ದ ಇವರು 1991ರ ಸೆಪ್ಟೆಂಬರ್ 9ರಂದು ಇಹಲೋಕ ತ್ಯಜಿಸಿದರು.

## ಶ್ರೀ ಬಾಳಾಸಾಹೇಬ ದೇವರಸ್

**ಪುಸ್ತಕ ಪರಿಚಯ**

ಲೇಖಕರು:
ಮೂಲ ಮರಾಠಿ: ಶರದ್ ಹೆಬಾಳ್ಕರ್
ಅನುವಾದ: ಕೃಷ್ಣಪ್ರಸಾದ ಬದಿ
ಪ್ರಕಾಶಕರು: ಸಾಹಿತ್ಯ ಸಂಗಮ
ಬೆಲೆ: 150 ರೂ.




ಡಾ. ಕೇಶವ ಬಲಿರಾಮ ಹೆಡಗೇವಾರರು ಸಂಘಸೌಧಕ್ಕೆ ಸದೃಢ ತಳಹದಿ ಹಾಕಿಕೊಟ್ಟು ಇಹಲೋಕ ಯಾತ್ರೆ ಮುಗಿಸಿದರು. ಭವ್ಯ ಸೌಧವನ್ನು ನಿರ್ಮಿಸಿದವರು ಮಾಧವ ಸದಾಶಿವ ಗೋಳ್ವಲ್ಕರ್ ಅವರು. ಆರಂಭದ ದಿನಗಳಿಂದಲೇ ಡಾಕ್ಟರ್ ಜೀ ಹಾಗೂ ಗುರೂಜಿಯವರ ನಿಕಟ ಒಡನಾಟದಲ್ಲಿ ಪಕ್ವಗೊಂಡ ಬಾಳಾಸಾಹೇಬರು ಈ ಸೌಧದ ಆಂತರಿಕ ವ್ಯವಸ್ಥೆಗಳನ್ನು ರೂಪಿಸಿದವರು ಎಂದರೆ ಅತಿಶಯೋಕ್ತಿಯಾಗದು.

ಅವರಿಗೆ ಸಂಘದಿಂದ ಹೊರತಾದ ವೈಯಕ್ತಿಕ ಬದುಕೆಂಬುದೇ ಇರಲಿಲ್ಲ ಎಂದರೆ ತಪ್ಪಾಗದು. ಸಂಘದೊಡನೆ ಆ ಪ್ರಮಾಣದ ತಾದಾತ್ಮ್ಯ ಅವರದು. ಸ್ವಯಂಸೇವಕನಾದ ಮೇಲೆ ಗಟನಾಯಕನಿಂದ ಮೊದಲ್ಗೊಂಡು ಸರಸಂಘಚಾಲಕರವರೆಗಿನ ವಿವಿಧ ಜವಾಬ್ದಾರಿಗಳ ನಿರ್ವಹಣೆ ಮಾಡಿರುವ ಅವರ ಬದುಕಿನ ಪ್ರೇರಣಾದಾಯಿಯಾದ ಅನೇಕ ಉದಾಹರಣೆಗಳು ಈ ಗ್ರಂಥದಲ್ಲಿ ಸಿಗುತ್ತವೆ. 6360581957

# ಟೀಮ್ ಸೇವಾದ ಸುಂದರ ಮನದ ಸತ್ಯವಂತ ಮಕ್ಕಳು

ಕೊರೋನಾ ಕಾಲದಲ್ಲಿ ಶಾಲೆಗಳೆಲ್ಲ ಮುಚ್ಚಿದ್ದವು, ಹಾಗೆಯೇ ಮಕ್ಕಳು ಮನೆಯಿಂದ ಹೊರಗೆ ಹೋಗಿ ಆಟವಾಡಲು ಅನುಮತಿಯೂ ಇರಲಿಲ್ಲ. ಆಗ ದೆಹಲಿಯ ಕೆಲವು ಮಕ್ಕಳು ತಮ್ಮ ಸಮಯವನ್ನು ಸದುಪಯೋಗ ಮಾಡಿಕೊಳ್ಳುವ ವಿಧಾನವನ್ನು ಕಂಡುಹಿಡಿದರು. ಅವರು ಒಂದು ಆತ್ಮೀಯ ಬಂಧನದಿಂದ ತಮ್ಮ ತಮ್ಮ ಬದುಕನ್ನು ಸುಂದರವಾಗಿಸಿಕೊಂಡರು.

ಲಾಕ್ಡೌನ್ ಸಮಯದಲ್ಲಿ ಪ್ರಾರಂಭವಾದ ದೆಹಲಿಯ ಸೇವಾಭಾರತಿಯ "ಈಚ್ ಒನ್ ಟೀಚ್ ಒನ್" ಅಂದರೆ, "ಒಬ್ಬರು ಇನ್ನೊಬ್ಬರಿಗೆ ಕಲಿಸಿ" ಕಾರ್ಯಕ್ರಮದಲ್ಲಿ ಒಂದಾದ ಡಿಪಿಎಸ್, ಜೇಡೀ ಗೋಯೆಂಕಾ, ಮಾಡ್ರನ್ ಸ್ಕೂಲ್ ನಂಥ ಪ್ರತಿಷ್ಠಿತ ಶಾಲೆಗಳ 1200ಕ್ಕೂ ಅಧಿಕ ಮಕ್ಕಳು ಅಂಬೇಡ್ಕರ್ ಬಸ್ತಿ, ವಾಲ್ಮೀಕಿ ಬಸ್ತಿ, ರವಿದಾಸ್ ಕ್ಯಾಂಪ್, ಕಾಲ್ಕಾಜೀ ಸಂಜಯ್ ಕ್ಯಾಂಪ್ ಬಸ್ತಿಗಳ ಮಕ್ಕಳಿಗೆ ಆನ್‌ಲೈನ್‌ನಲ್ಲಿ ಪಾಠ ಮಾಡಿದರು, ಸುಂದರವಾದ ಕಥೆಗಳನ್ನು ಹೇಳಿದರು, ನೃತ್ಯ ಕಲಿಸಿದರು, ಪೆನ್‌ಸ್ಟ್ಯಾಂಡ್ ನಂತಹ ಅನೇಕ ಕಲಾತ್ಮಕ ವಸ್ತುಗಳನ್ನು ಮಾಡಲು ಕಲಿಸಿದರು. ಸಕಲ ಐಷಾರಾಮಗಳಿಂದ ಸಂಪನ್ನರಾದ ಶ್ರೀಮಂತ ಕುಟುಂಬದ ಮಕ್ಕಳು ಮತ್ತು ಜೋಪಡಿಯಲ್ಲಿರುವ ಸೌಲಭ್ಯ ವಂಚಿತ ಮಕ್ಕಳು, ಇಬ್ಬರನ್ನೂ ಹೃದಯದಿಂದ ಬೆಸೆಯುವ ಇದೊಂದು ಅಪರೂಪದ ಸೇವಾಯಾತ್ರೆಯಾಗಿತ್ತು.

ಈ ಯಾತ್ರೆಯು ಎರಡೂ ಪಂಗಡಗಳ ತಾರತಮ್ಯವನ್ನು ತೊಡೆದು, ಎಲ್ಲರ ಜೀವನದಲ್ಲಿ ಒಂದು ಅದ್ಭುತವಾದ ಹಾದಿಯನ್ನು ರೂಪಿಸಿತು. ದೆಹಲಿಯ ಸೇವಾಭಾರತಿಯ ಹಿರಿಯ ಪ್ರಾಂತಪ್ರಚಾರಕ ಭೂಪೇಂದ್ರಜೀ ಹೇಳುತ್ತಾರೆ, ಕೊರೋನಾ ಸಂದರ್ಭ ಕಳೆದ ನಂತರ "ಈಚ್ ಒನ್ ಟೀಚ್ ಒನ್" ಕಾರ್ಯಕ್ರಮವು ಈಗ ಸೇವೆಯ ನಂತರ ರಾಷ್ಟ್ರಭಾವವೂ ಸೇರಿಕೊಂಡ "ಟೀಮ್ ಸೇವಾ" ಎಂಬ ಹೊಸ ರೂಪ ತಳೆದಿದೆ.




2020ರ ಮಾರ್ಚ್ ಸಮಯ. ಕೊರೋನಾ ಭಾರತದಲ್ಲಿ ಪ್ರವೇಶ ಮಾಡಿತು, ಎಲ್ಲ ಶಾಲೆಗಳೂ ಅನಿರ್ದಿಷ್ಟಾವಧಿ ಮುಚ್ಚಿಹೋದವು. ಆಗ ದೆಹಲಿಯ ಸೇವಾಭಾರತಿಯ ಪ್ರಾಂತ ಸಂಪರ್ಕ ಪ್ರಮುಖರಾದ ನಿಧಿ ಅಹುಜಾ ಅವರನ್ನು, ಮೊದಲಿನಿಂದಲೂ ಸೇವಾಭಾರತಿಯ ಮೂಲಕ ಆಯೋಜಿಸಲ್ಪಡುತ್ತಿದ್ದ ಬೇಸಿಗೆ ಮತ್ತು ಚಳಿಗಾಲದ ಶಿಬಿರಗಳಲ್ಲಿ ಸೇವಾಬಸ್ತಿಗಳ ಮಕ್ಕಳೊಂದಿಗೆ ಸಂಪರ್ಕ ಇಟ್ಟುಕೊಂಡಿದ್ದ 50ಮಕ್ಕಳು ಫೋನ್ ಮೂಲಕ ಸಂಪರ್ಕಿಸಿದರು. ಇದೇ ಸಮಯದಲ್ಲಿ ಸ್ವಯಂ ಪ್ರಧಾನಿ ಮೋದಿಯವರು ಮಕ್ಕಳು ಮತ್ತು ಹಿರಿಯರು ಮನೆಯಿಂದ ಹೊರಹೋಗಬಾರದೆನ್ನುವ ವಿನಂತಿಯನ್ನು ಮಾಡುತ್ತಿದ್ದರು. ತಾಯಿತಂದೆಯರಿಗೆ ಹೆದರಿಕೆಯಿತ್ತು ಹಾಗೂ ಕಾರ್ಯಕರ್ತರಿಗೂ ಈ ಸಮಯದಲ್ಲಿ ಮಕ್ಕಳನ್ನು ಒಳ್ಳೆಯ ಕೆಲಸದಲ್ಲಿ ಹೇಗೆ ತೊಡಗಿಸಬೇಕು ಎನ್ನುವ ಚಿಂತೆಯೂ ಇತ್ತು. ಆಗ ನಿಧಿಜೀ ಅವರು ಈ "ಈಚ್ ಒನ್ ಟೀಚ್ ಒನ್" ಕಾರ್ಯಕ್ರಮವನ್ನು ರೂಪಿಸಿ, ಗೂಗಲ್ ಫಾರ್ಮ್‌ಗಳ ಮೂಲಕ ಮಕ್ಕಳಿಗೆ ನಿವೇದನೆ ತಲುಪಿಸಿದರು.

ಸೇವಾಬಸ್ತಿಯ ಮಕ್ಕಳಿಗೆ ಯಾರ್ಯಾರಿಗೆ ಕಲಿಸುವ ಇಚ್ಛೆ ಇದೆ ಎಂಬ ಅವರ ನಿವೇದನೆಗೆ 1000ಕ್ಕೂ ಹೆಚ್ಚಿನ ಮಕ್ಕಳು ಸ್ವಯಂಪ್ರೇರಿತರಾಗಿ ಖುಷಿ ಖುಷಿಯಲ್ಲಿ ಈ ಕಾರ್ಯಕ್ರಮದಲ್ಲಿ ಭಾಗವಹಿಸುವ ಇಚ್ಛೆ ವ್ಯಕ್ತಪಡಿಸಿದಾಗ ನಿಧಿಯವರ ಸಂತೋಷಕ್ಕೆ ಪಾರವೇ ಇರಲಿಲ್ಲ. ಆಗ ಸೇವಾಭಾರತಿಯು ಸಂಸ್ಕಾರ ಕೇಂದ್ರಗಳ ನಿರೀಕ್ಷಕರು ಹಾಗೂ ಶಿಕ್ಷಕಿಯರ ಸಹಯೋಗದಿಂದ ಬಸ್ತಿಯಲ್ಲಿರುವ ಕೆಲವು ಆಂಡ್ರಾಯ್ಡ್ ಫೋನ್ ಉಪಯೋಗಿಸಿ ಸೇವಾಬಸ್ತಿಯ ಒಂದು ಮಗುವಿಗೂ, ಸೌಲಭ್ಯವಿರುವ ಒಂದು ಮಗುವಿನೊಂದಿಗೂ ಆನ್‌ಲೈನ್ ಸಂಪರ್ಕ ಮಾಡಿಸಿದರು. ವಾರದಲ್ಲಿ ಒಂದು ಬಾರಿ ನಡೆದ ಈ ತರಗತಿಯು ಭೇದಭಾವವನ್ನು ತೊಡೆದು ಹಾಕಿ ಸಾರ್ಥಕ ಮಿತ್ರತ್ವವನ್ನು ಸ್ಥಾಪಿಸಿತು.

ಈಗ ಈ ಕಾರ್ಯಕ್ರಮದ ಚಾಲನೆಯ ಜವಾಬ್ದಾರಿ ಹೊತ್ತಿರುವ ಸೋದರಿ ದೀಪ್ತಿ ಹೇಳುತ್ತಾರೆ. ಈ ತರಗತಿಗಳು ದೊಡ್ಡವರ ವಿಭಾಗ, ಕಥೆ ಹೇಳುವ ವಿಭಾಗ, ಹವ್ಯಾಸಗಳ ವಿಭಾಗ ಮತ್ತು ಬುಕ್ ಬ್ಯಾಂಕ್ ವಿಭಾಗ ಎಂಬ 4 ವಿಭಾಗಗಳಲ್ಲಿ ನಡೆಯಿತು. ದೊಡ್ಡವರ ವಿಭಾಗದಲ್ಲಿ ಪರಸ್ಪರ ಸ್ನೇಹವನ್ನು ದೃಢಗೊಳಿಸಲಾಯಿತು. ಕಥಾ ವಿಭಾಗದಲ್ಲಿ ವಾಲಂಟಿಯರ್ ಮಕ್ಕಳು ಕೆಲವು ನೈತಿಕ ಹಾಗೂ ವೈಜ್ಞಾನಿಕ ಕಥೆಗಳನ್ನು ದೊಡ್ಡವರಿಗೆ ಹೇಳಿದರು. ಹವ್ಯಾಸಗಳ ತರಗತಿಯಲ್ಲಿ ಡ್ರಾಯಿಂಗ್ ಪೆಯಿಂಟಿಂಗ್, ಕಸೂತಿಯ ಹಲವು ವಿಧಗಳನ್ನು ಆನ್‌ಲೈನ್ ಮೂಲಕ ಕಲಿಸಲಾಯಿತು ಮತ್ತು ಬುಕ್‌ಬ್ಯಾಂಕ್‌ನಲ್ಲಿ ಸೇವಾಬಸ್ತಿಯ ಮಕ್ಕಳಿಗೆ ಒಳ್ಳೆಯ ಪುಸ್ತಕಗಳನ್ನು ಕಳಿಸಲಾಯಿತು.


ಈ ಅಭಿಯಾನದಲ್ಲಿ 11ರಿಂದ 19ವರ್ಷದೊಳಗಿನ 1500ಮಕ್ಕಳನ್ನು ಪ್ರೇರೇಪಿಸಲು ಮತ್ತು ಅವರ ಮನೋಬಲವನ್ನು ಹೆಚ್ಚಿಸಲು ಭಾರತೀಯ ಕ್ರಿಕೆಟ್ ತಂಡದ ಕ್ಯಾಪ್ಟನ್ ವಿರಾಟ್ ಕೊಹ್ಲಿ, ಪ್ರಸಿದ್ಧ ಬ್ಯಾಟ್ಸ್‌ಮನ್ ಶಿಖರ್ ಧವನ್, ಸ್ಫೂರ್ತಿದಾಯಕ ಮಾತುಗಾರ ಶಿವಖೇಡಾ ಸಹಿತ ಅನೇಕ ಹೆಸರಾಂತ ವ್ಯಕ್ತಿಗಳ ವಿಡಿಯೋಗಳನ್ನು ಮಾಡಿ ಈ ಮಕ್ಕಳಿಗೆ ಶುಭ ಹಾರೈಸಲಾಯಿತು.

ಕೊರೋನಾ ಕಾಲದಲ್ಲಿ ಶುರುವಾದ ದೆಹಲಿಯ ಸೇವಾಭಾರತಿಯ ಈ ಶಿಕ್ಷಣ ಅಭಿಯಾನ ಇದೀಗ ಈ ಮಕ್ಕಳಿಗೆ ಜೀವನವಿಡೀ ಜೊತೆಯಾಗಿದೆ. ಡಿಸೆಂಬರ್‌ನಲ್ಲಿ ಮೊದಲ ಸಲ ಈ ಮಕ್ಕಳು ಪರಸ್ಪರ ಭೇಟಿಯಾದ ಆ ದೃಶ್ಯ ರಾಮ-ಭರತರ ಮಿಲನದಂತೆ ಹೃದಯಸ್ಪರ್ಶಿಯಾಗಿತ್ತು.

## ಸಂಬೋಧನೆ ಗೌರವಯುತವಾಗಿರಲಿ, ಲಘು ಮಾತುಗಳ ಕುರಿತು ಎಚ್ಚರಿಕೆ ಇರಲಿ

ನುಡಿದರೆ ಮುತ್ತಿನ ಹಾರದಂತಿರಬೇಕು,
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು,
ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು,
ನುಡಿದರೆ ಲಿಂಗಮೆಚ್ಚಿ ಅಹುದಹುದೆನಬೇಕು

ಎಂಬ ಬಸವಣ್ಣನವರ ವಚನ ನಾವಾಡುವ ಮಾತು ಹೇಗಿರಬೇಕು ಎನ್ನುವುದನ್ನು ಸಾರುತ್ತದೆ. ಈ ಮಾತು ಸಾರ್ವಕಾಲಿಕವಾಗಿ ಮಾನವನ ನಾಗರಿಕ ಶಿಷ್ಟಾಚಾರವನ್ನು ಸಾರುವ ಮಾತುಗಳೂ ಆಗಿವೆ. ಸಂಬೋಧನೆ ಗೌರವಯುತವಾಗಿರಬೇಕು. ಏಕವಚನದ ಪ್ರಯೋಗ, ಲಘು ಮಾತುಗಳ (Loose Talks) ಕುರಿತು ಎಚ್ಚರಿಕೆಯಿರಲಿ. ಗೊತ್ತಿಲ್ಲದ ವಿಷಯಗಳ ಬಗ್ಗೆ ಮಾತನಾಡಬಾರದು. (Don't talk what you don't Know). ನುಡಿ ಮಾತಿನಲ್ಲಿ ಸ್ಪಷ್ಟತೆ ಹಾಗೂ ನೇರವಂತಿಕೆ ಇರಬೇಕು. ನಾವು ತಮಾಷೆಗಾಗಿ ಆಡುವ ಮಾತುಗಳು ಕೂಡ ತಮಾಷೆಯ ಗಡಿಯನ್ನು ಮೀರಬಾರದು. ಅದು ಇನ್ನೊಬ್ಬರ ಮನವನ್ನು ನೋಯಿಸಬಾರದು. ಅನಗತ್ಯ ಮಾತುಗಳಿಗೆ ನಾವೇ ಕಡಿವಾಣ ಹಾಕಬೇಕು.



ಸಂಪಾದಕೀಯ ಸಹಕಾರ: ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯಕೃಷ್ಣ ಹೆಚ್ ವಿ, ಸುಬ್ರಾಯ ನಂದೋಡಿ, ಪಂಚಮಿ ಬಾಕಿಲಪದವು, ಸುಲಕ್ಷಣಾ ಶರ್ಮಾ

## ಭಾರತದ ಸಾಮಾಜಿಕ ಭದ್ರತಾ ವ್ಯಾಪ್ತಿ ಶೇ. 64.3 ಕ್ಕೆ ಏರಿಕೆ:

ಭಾರತದ ಸಾಮಾಜಿಕ ಭದ್ರತಾ ವ್ಯಾಪ್ತಿ 2015ರಲ್ಲಿ ಶೇ.19 ರಿಂದ 2025ರಲ್ಲಿ ಶೇ.64.3ಕ್ಕೆ ಏರಿದೆ. ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ ILOSTATನ ಇತ್ತೀಚಿನ ಮಾಹಿತಿಯ ಪ್ರಕಾರ, ಕಳೆದ ದಶಕದಲ್ಲಿ ಈ ವ್ಯಾಪ್ತಿಯು ಶೇ.45 ರಷ್ಟು ಏರಿಕೆಯಾಗಿದೆ. ಸಾಮಾಜಿಕ ಭದ್ರತಾ ವ್ಯಾಪ್ತಿ ಎಂದರೆ ಒಬ್ಬ ವ್ಯಕ್ತಿಯು ಸಾಮಾಜಿಕ ಭದ್ರತಾ ಯೋಜನೆಗಳಡಿಯಲ್ಲಿ (ಉದಾಹರಣೆಗೆ, ಸಾಮಾಜಿಕ ಭದ್ರತಾ ವಿಮೆ, ನಿವೃತ್ತಿ ಭತ್ಯೆ, ಅಂಗವೈಕಲ್ಯ ಭತ್ಯೆ, ಆರೋಗ್ಯ ವಿಮೆ ಇತ್ಯಾದಿ) ರಕ್ಷಣೆ ಅಥವಾ ಪ್ರಯೋಜನಗಳನ್ನು ಪಡೆಯಲು ಅರ್ಹನಾಗಿರುವ ಸ್ಥಿತಿಯನ್ನು ಸೂಚಿಸುತ್ತದೆ. ILOSTAT ಸಾಮಾಜಿಕ ಭದ್ರತಾ ವ್ಯಾಪ್ತಿಯಲ್ಲಿ ಭಾರತದ ಸಾಧನೆಯನ್ನು ಗುರುತಿಸಿದ್ದು, 94 ಕೋಟಿಗೂ ಹೆಚ್ಚು ಜನರು ಈಗ ಕನಿಷ್ಠ ಒಂದಾದರೂ ಸಾಮಾಜಿಕ ರಕ್ಷಣಾ ಪ್ರಯೋಜನದ ಅಡಿಯಲ್ಲಿ ಒಳಪಟ್ಟಿದ್ದಾರೆ ಎಂದು ಅಧಿಕೃತವಾಗಿ ಪ್ರಕಟಿಸಿದೆ. ಫಲಾನುಭವಿಗಳ ಸಂಖ್ಯೆಯ ವಿಷಯದಲ್ಲಿ, ಭಾರತವು ಈಗ ವಿಶ್ವದಲ್ಲಿ ಎರಡನೇ ಸ್ಥಾನದಲ್ಲಿದೆ, ಸುಮಾರು 94 ಕೋಟಿ ನಾಗರಿಕರಿಗೆ ಸಾಮಾಜಿಕ ರಕ್ಷಣೆಯನ್ನು ಒದಗಿಸುತ್ತಿದೆ.


## ಭಾರತೀಯ ನೌಕಾಪಡೆಗೆ ಸೇರ್ಪಡೆಗೊಂಡ ಐಎನ್‌ಎಸ್ ಅರ್ನಾಲ

ಐಎನ್‌ಎಸ್ ಅರ್ನಾಲ (INS Arnala) ಭಾರತೀಯ ನೌಕಾಪಡೆಯ ಮೊದಲ ಆಂಟಿ-ಸಬ್‌ಮರೀನ್ ವಾರ್‌ಫೇರ್ ಶ್ಯಾಲೋ ವಾಟರ್ ಕ್ರಾಫ್ಟ್ (ASW-SWC) ಆಗಿದ್ದು, ಇದನ್ನು ವಿಶಾಖಪಟ್ಟಣಂನ ನೌಕಾಂಗಣದಲ್ಲಿ ಕಮಿಷನಿಂಗ್ ಮಾಡಲಾಗಿದೆ. ಇದು 16 ASW-SWCಗಳ ಸರಣಿಯ ಮೊದಲ ಹಡಗಾಗಿದ್ದು, ಶತ್ರು ಪಾದಾಳು ದೋಣಿಗಳು, ಡ್ರೋನ್‌ಗಳು ಮತ್ತು ಜಲಾಂತರ್ಗಾಮಿ ವಾಹನಗಳಿಂದ ತೀರದ ರಕ್ಷಣೆಗಾಗಿ ವಿನ್ಯಾಸಗೊಳಿಸಲಾಗಿದೆ. ಈ ಹಡಗನ್ನು ಸ್ವದೇಶಿಯಾಗಿ ವಿನ್ಯಾಸಗೊಳಿಸಿ, ಗಾರ್ಡನ್ ರೀಚ್ ಶಿಪ್‌ಬಿಲ್ಡರ್ಸ್ ಅಂಡ್ ಇಂಜಿನಿಯರ್ಸ್(GRSE) ನಿಂದ ನಿರ್ಮಿಸಲಾಗಿದೆ,

# ಸಾಲುದ್ದದ ಸುದ್ದಿಗಳು

ಇದು ಆತ್ಮನಿರ್ಭರ ಭಾರತದ ಉದ್ದೇಶವನ್ನು ಪ್ರತಿಬಿಂಬಿಸುತ್ತದೆ. ವಿಶಾಖಪಟ್ಟಣಂನಲ್ಲಿ, ರಕ್ಷಣಾ ಪಡೆಗಳ ಮುಖ್ಯಸ್ಥ ಜನರಲ್ ಅನಿಲ್ ಚೌಹಾಣ್ (CDS) ಅವರ ಸಮ್ಮುಖದಲ್ಲಿ ಇದನ್ನು ಲೋಕಾರ್ಪಣೆ ಮಾಡಲಾಗಿದೆ. ಕಡಲತೀರದ ಸಮೀಪದ ಆಂಟಿ-ಸಬ್‌ಮರೀನ್ ಕಾರ್ಯಾಚರಣೆಗಳಿಗಾಗಿ, ಆಧುನಿಕ ಸಾಮರ್ಥ್ಯಗಳನ್ನು ಇದು ಹೊಂದಿದೆ. ಇದರ ಲಾಂಛನವು ನೀಲಿ ಹಿನ್ನೆಲೆಯಲ್ಲಿ ಆಗರ್ ಶೆಲ್ (Auger Shell) ಚಿತ್ರಣವನ್ನು ಒಳಗೊಂಡಿದ್ದು, ದೇವನಾಗರಿ ಲಿಪಿಯಲ್ಲಿ ಹಡಗಿನ ಹೆಸರನ್ನು ಒಳಗೊಂಡಿದೆ.

## ಅಮೆರಿಕಕ್ಕೆ ಭಾರತದ ಸರಕು ರಫ್ತು ಶೇ. 16.93 ರಷ್ಟು ಏರಿಕೆ



ವಾಣಿಜ್ಯ ಸಚಿವಾಲಯದ ಅಂಕಿಅಂಶಗಳ ಪ್ರಕಾರ, ಮೇ ತಿಂಗಳಲ್ಲಿ ಅಮೆರಿಕಕ್ಕೆ ಭಾರತದ ಸರಕು ರಫ್ತು ಶೇ. 16.93 ರಷ್ಟು ಏರಿಕೆಯಾಗಿ 8.83 ಬಿಲಿಯನ್ ಡಾಲರ್‌ಗಳಿಗೆ ತಲುಪಿದೆ, ಆದರೆ ಆಮದು ಶೇ. 5.76 ರಷ್ಟು ಇಳಿಕೆಯಾಗಿ 3.62 ಬಿಲಿಯನ್ ಡಾಲರ್‌ಗಳಿಗೆ ತಲುಪಿದೆ. ಏಪ್ರಿಲ್-ಮೇ ಅವಧಿಯಲ್ಲಿ, ಅಮೆರಿಕಕ್ಕೆ ದೇಶದ ರಫ್ತು ಶೇ. 21.78 ರಷ್ಟು ಏರಿಕೆಯಾಗಿ 17.25 ಬಿಲಿಯನ್ ಡಾಲರ್‌ಗಳಿಗೆ ತಲುಪಿದೆ, ಆದರೆ ಆಮದು ಶೇ. 25.8 ರಷ್ಟು ಏರಿಕೆಯಾಗಿ 8.87 ಬಿಲಿಯನ್ ಡಾಲರ್‌ಗಳಿಗೆ ತಲುಪಿದೆ ಎಂದು ದತ್ತಾಂಶವು ತೋರಿಸಿದೆ.

## ದೇಶವ್ಯಾಪಿ 2000 ಚಾಲನಾ ತರಬೇತಿ ಶಾಲೆಗಳನ್ನು ತೆರೆಯಲಿದೆ ಕೇಂದ್ರ ಸರ್ಕಾರ

ದೇಶದ ವಿವಿಧ ಭಾಗಗಳಲ್ಲಿ 2000 ಚಾಲನಾ ತರಬೇತಿ ಶಾಲೆಗಳನ್ನು ತೆರೆಯಲು ಸರ್ಕಾರ ನಿರ್ಧರಿಸಿದೆ. ನವದೆಹಲಿಯಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ, ದೇಶದ ಹಿಂದುಳಿದ ಮತ್ತು ಬುಡಕಟ್ಟು ಪ್ರದೇಶಗಳಲ್ಲಿ ಈ ತರಬೇತಿ ಶಾಲೆಗಳನ್ನು ತೆರೆಯಲಾಗುವುದು, ಇದು ಯುವಕರಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತದೆ ಎಂದು ಹೇಳಿದರು. ದೇಶದಲ್ಲಿ ಸುಮಾರು 22 ಲಕ್ಷ ಚಾಲಕರ ಕೊರತೆಯಿದೆ ಮತ್ತು ಈ ತರಬೇತಿ ಶಾಲೆಗಳು ಕೌಶಲ್ಯಪೂರ್ಣ ಚಾಲಕರ ಕೊರತೆಯನ್ನು ಪೂರೈಸಲು ಸಹಾಯ ಮಾಡುತ್ತದೆ ಎಂದು ಅವರು ಹೇಳಿದರು.

## ಭಾರತದ ರಕ್ಷಣಾ ಉತ್ಪಾದನೆ 174% ಏರಿಕೆ, ರಫ್ತು 34 ಪಟ್ಟು ಹೆಚ್ಚಳ

11 ವರ್ಷಗಳನ್ನು ಪೂರೈಸಿದ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಭಾರತದ ರಕ್ಷಣಾ ವಲಯದಲ್ಲಿ ಸ್ವಾವಲಂಬನೆ, ಆಧುನೀಕರಣ, ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳ ರಫ್ತಿನ ಮೇಲೆ ಕೇಂದ್ರೀಕರಿಸಿ ಗಮನಾರ್ಹ ಪರಿವರ್ತನೆಯನ್ನು ತಂದಿದೆ. ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತಿಕ್ರಿಯೆಯಾಗಿ ಮೇ 7 ರಂದು ಪ್ರಾರಂಭಿಸಲಾದ ಆಪರೇಷನ್ ಸಿಂಧೂರ್, ರಕ್ಷಣಾ ಉತ್ಪಾದನೆಯ ಮೇಲೆ ಭಾರತದ ಹೆಚ್ಚುತ್ತಿರುವ ಸ್ವಾವಲಂಬನೆ ಮತ್ತು ಭದ್ರತಾ ಬೆದರಿಕೆಗಳಿಗೆ ಪರಿಣಾಮಕಾರಿಯಾಗಿ ಪ್ರತಿಕ್ರಿಯಿಸುವ ಸಾಮರ್ಥ್ಯವನ್ನು ಪ್ರದರ್ಶಿಸಿತು. ಭಾರತದ ರಕ್ಷಣಾ ಉತ್ಪಾದನೆಯು 2014 ರಿಂದ ಶೇ.174 ರಷ್ಟು ಏರಿಕೆಯಾಗಿದ್ದು, 2023-24ರಲ್ಲಿ ರೂ 1.27 ಲಕ್ಷ ಕೋಟಿ ತಲುಪಿದೆ. ಈ ಬೆಳವಣಿಗೆಗೆ ಸರ್ಕಾರವು ಸ್ಥಳೀಯ ವಿನ್ಯಾಸ, ಅಭಿವೃದ್ಧಿ ಮತ್ತು ಉತ್ಪಾದನೆಗೆ ಒತ್ತು ನೀಡಿರುವುದು ಕಾರಣವಾಗಿದೆ. ಭಾರತದ ರಕ್ಷಣಾ ರಫ್ತುಗಳು 34 ಪಟ್ಟು ಬೆಳೆದು 2024-25 ರಲ್ಲಿ ರೂ.23,622 ಕೋಟಿ ತಲುಪಿದೆ. ದೇಶವು ಈಗ ಯುಎಸ್, ಫ್ರಾನ್ಸ್ ಮತ್ತು ಅರ್ಮೇನಿಯಾ ಸೇರಿದಂತೆ 85ಕ್ಕೂ ಹೆಚ್ಚು ದೇಶಗಳಿಗೆ ರಕ್ಷಣಾ ಉಪಕರಣಗಳನ್ನು ರಫ್ತು ಮಾಡುತ್ತದೆ.

## ಆಪರೇಷನ್ ಸಿಂಧು: ಇರಾನ್‌ನಿಂದ 517 ಭಾರತೀಯ ಪ್ರಜೆಗಳ ಸ್ಥಳಾಂತರ

ಇಸ್ರೇಲ್ ಮತ್ತು ಇರಾನ್ ನಡುವೆ ನಡೆಯುತ್ತಿರುವ ಸಂಘರ್ಷದಿಂದಾಗಿ ಪರಿಸ್ಥಿತಿ ಹದಗೆಡುತ್ತಿರುವ ಕಾರಣ ಇರಾನ್‌ನಿಂದ ಭಾರತೀಯ ಪ್ರಜೆಗಳನ್ನು ಸ್ಥಳಾಂತರಿಸಲು 'ಆಪರೇಷನ್ ಸಿಂಧು' ಕಾರ್ಯಾಚರಣೆಯನ್ನು ಪ್ರಾರಂಭಿಸಲಾಗಿದೆ. ಇರಾನ್‌ನಿಂದ ಭಾರತೀಯರನ್ನು ಕರೆತರುವ ವಿಶೇಷ ಸ್ಥಳಾಂತರ ವಿಮಾನ ತುರ್ಕಮೆನಿಸ್ತಾನದ ಅಶ್ಗಬಾತ್‌ನಿಂದ ಇಂದು ಬೆಳಗಿನ ಜಾವ ನವದೆಹಲಿಗೆ ಬಂದಿಳಿದಿದೆ. ಇದರೊಂದಿಗೆ, ಸಿಂಧು ಕಾರ್ಯಾಚರಣೆಯ ಅಡಿಯಲ್ಲಿ ಇರಾನ್‌ನಿಂದ ಇಲ್ಲಿಯವರೆಗೆ 517 ಭಾರತೀಯ ಪ್ರಜೆಗಳು ಸ್ವದೇಶಕ್ಕೆ ಮರಳಿದ್ದಾರೆ. ಜೂನ್ 20ರ ರಾತ್ರಿ, 290 ಭಾರತೀಯ ಪ್ರಜೆಗಳನ್ನು ಹೊತ್ತ ವಿಮಾನವು ನವದೆಹಲಿಗೆ ಆಗಮಿಸಿದೆ.

# 2500 ರೂ.ನಲ್ಲಿ ಮಳೆನೀರು ಕೊಯ್ಲು ಮಾಡುವ ವಿಧಾನ ತಿಳಿಸಿದ ಮುಂಬೈನ ಸುಭಾಜಿತ್

ಮಳೆನೀರು ನಮಗೆ ಲಭ್ಯವಿರುವ ಅತ್ಯಂತ ದೊಡ್ಡ ನೀರಿನ ಮೂಲ. ಆದರೆ ಒಂದು ವರದಿಯ ಪ್ರಕಾರ ಕೇವಲ ಶೇ.8ರಷ್ಟು ಮಳೆಯ ನೀರನ್ನು ಮಾತ್ರ ನಾವು ಶೇಖರಿಸುತ್ತಿದ್ದೇವೆ. ಉಳಿದ ನೀರು ವ್ಯರ್ಥವಾಗುತ್ತಿವೆ. ಮಳೆಯ ನೀರು ವ್ಯರ್ಥವಾಗಿ ಹರಿಯುವ ಪ್ರಮಾಣ ನಗರಗಳಲ್ಲಿ ಹೆಚ್ಚು. ಭಾರತದ ಬೃಹತ್ ನಗರಗಳಲ್ಲಿ ಒಂದಾದ ಮುಂಬೈನಲ್ಲಿ ಮಳೆಗಾಲದ ಸಮಯದಲ್ಲಿ ಮಳೆಯ ನೀರನ್ನು ಸಮರ್ಥವಾಗಿ ಬಳಸಿಕೊಳ್ಳುವ ಬದಲು, ನಿರ್ಲಕ್ಷ್ಯದಿಂದ ಚರಂಡಿಗಳಲ್ಲಿ ವ್ಯರ್ಥವಾಗಿ ಹರಿಯುವುದು ಉಳಿದ ನಗರಗಳಷ್ಟೆ ಸಾಮ್ಯವಾದ ಸಂಗತಿ. ಆದರೆ ಮುಂಬೈನ ಒಬ್ಬ ನಾಗರಿಕನಿಗೆ ಹೀಗೆ ವ್ಯರ್ಥವಾಗಿ ಹರಿಯುತ್ತಿರುವ ನೀರನ್ನು ಸಂರಕ್ಷಿಸಬೇಕು ಎನ್ನುವ ಯೋಚನೆ ಮೂಡಿತು. ಇಂದು ಅದು ಅನುಕರಣೆ ಯೋಗ್ಯವಾದ ವಿಧಾನವಾಗಿ ಬದಲಾಗಿದೆ.

ಮುಂಬೈ ನಗರದ ಸುಭಾಜಿತ್ ಮುಖರ್ಜಿ ಮಳೆನೀರನ್ನು ಉಪಯೋಗಿಸುವ ಹೊಸ ಪ್ರಯತ್ನವನ್ನು ಮಾಡಿದ್ದಾರೆ. ಕಡಿಮೆ ಖರ್ಚಿನಲ್ಲಿ ಮಳೆನೀರು ಕೊಯ್ಲು ಮತ್ತು ಅಂತರ್ಜಲ ಹೆಚ್ಚಿಸುವ ವಿಧಾನವನ್ನು ರೂಢಿಸಿಕೊಂಡಿದ್ದಾರೆ. ನಿವೃತ್ತ ಐಪಿಎಸ್ ಅಧಿಕಾರಿ ಕಿರಣ್ ಬೇಡಿ ಅವರು ಮಳೆ ನೀರಿನ ಕೊಯ್ಲಿನ ಬಗೆಗೆ ಮಾಹಿತಿಯನ್ನು ಹಂಚಿಕೊಂಡಿದ್ದರು. ಆ ಕಲ್ಪನೆಯಿಂದ ಸ್ಫೂರ್ತಿಯನ್ನು ಪಡೆದ ಸುಭಾಜಿತ್ ಐಐಟಿ ಬಾಂಬೆಯ ಇಂಜಿನಿಯರ್‌ಗಳ ಸಹಾಯದಿಂದ ಹೊಸ ಮಾದರಿಯನ್ನು ವಿನ್ಯಾಸಗೊಳಿಸಿದರು. ಅವರು ಕಡಿಮೆ ವೆಚ್ಚದ ಈ ವಿನೂತನ ಮಾದರಿಯನ್ನು ಪಿವಿಸಿ ಪೈಪ್‌ಗಳನ್ನು ಮತ್ತು ದೊಡ್ಡ ನೀರಿನ ಡ್ರಮ್‌ನ್ನು ಬಳಸಿಕೊಂಡಿದ್ದಾರೆ.

**ಅವರು ರೂಢಿಸಿಕೊಂಡ ವಿಧಾನ ಹೀಗಿದೆ:** ಅಗತ್ಯವಿರುವ ಗಾತ್ರದ ಮತ್ತು ಸಾಮರ್ಥ್ಯದ ಬ್ಯಾರೆಲ್‌ನ್ನು ಆಯ್ಕೆ ಮಾಡಿ, ಅದರ ಮೇಲ್ಮೈ ಸುತ್ತಲೂ ಕೆಲವು ರಂಧ್ರಗಳನ್ನು ಮಾಡಿದರು. 3×3 ಅಥವಾ 5×5 ಗುಂಡಿಯನ್ನು ಅಗೆದು, ಅದರಲ್ಲಿ ಡ್ರಮ್ ಅನ್ನು ಇಟ್ಟರು. ಅದಕ್ಕೆ ಟೆರೇಸ್ ನಿಂದ ನೀರು ಹರಿದು ಬರುವಂತೆ ಮಾಡಲು ಪಿವಿಸಿ ಪೈಪ್‌ನ್ನು ಡ್ರಮ್‌ಗೆ ಜೋಡಿಸಿದರು. ಡ್ರಮ್‌ಗೆ ಮಣ್ಣು ಪ್ರವೇಶಿಸದಂತೆ ತಡೆಯಲು ಬೆಣಚುಕಲ್ಲುಗಳನ್ನು ಗುಂಡಿಯ ಸುತ್ತಲೂ ತುಂಬಿಸಿದರು.

ಈ ವ್ಯವಸ್ಥೆಯಿಂದಾಗಿ ಟೆರೇಸ್ ಮೇಲೆ ಬೀಳುವ ನೀರು ಭೂಮಿಯೊಳಗಿರುವ ಗುಂಡಿಗೆ ಹೋಗುತ್ತದೆ. ಇದರ ಮೂಲಕ, ಇದು ಅಂತರ್ಜಲ, ಕೊಳ, ಸರೋವರ ಮತ್ತು ಆಳವಾದ ಕೊಳವೆ ಬಾವಿಗಳಂತಹ ಇತರ ಹತ್ತಿರದ ನೀರಿನ ಮೂಲಗಳನ್ನು ಸಂರಕ್ಷಿಸಲು ಸಾಧ್ಯವಾಗುತ್ತದೆ ಎನ್ನುವುದನ್ನು ಸುಭಾಜಿತ್ ಕಂಡುಕೊಂಡರು. ಸುಭಾಜಿತ್ 10 ದಿನಗಳವರೆಗೆ ನೀರನ್ನು ಹಿಡಿದಿಟ್ಟುಕೊಳ್ಳುವ ಮಳೆನೀರು ಕೊಯ್ಲು ವ್ಯವಸ್ಥೆಯನ್ನು ಸಹ ಮಾಡಿದರು. ಆದರೆ ಆ ನೀರನ್ನು ಕುಡಿಯಲು ಉಪಯೋಗಿಸಲು ಕಷ್ಟ, ಉಳಿದ ದೈನಂದಿನ ಕಾರ್ಯಗಳಿಗೆ ಅದನ್ನು ಬಳಕೆ ಮಾಡಬಹುದಾಗಿದೆ ಎನ್ನುವುದು ಅವರ ಅನುಭವದ ಮಾತು.

ಸುಭಾಜಿತ್ ಅವರು ಕಂಡುಕೊಂಡ ಹೊಸ ವಿಧಾನಗಳು ಅದೆಷ್ಟೋ ಮಂದಿಗೆ ಮಾದರಿಯಾಗಿದೆ. ಕಡಿಮೆ ಖರ್ಚಿನ ವ್ಯವಸ್ಥೆ ಎಲ್ಲರಿಗೂ ಮಾಡಲು ಅನುಕೂಲಕರವಾಗಿದೆ. 2,500 ರಿಂದ 5,000 ರೂ. ಗಳಷ್ಟು ವೆಚ್ಚವಾಗುವ ಈ ವ್ಯವಸ್ಥೆಯು ಮುಂಬೈನ ಶಾಲೆಗಳು, ಉದ್ಯಾನವನಗಳು ಮತ್ತು ವಸತಿ ಸಂಘಗಳಲ್ಲಿ ಸಾವಿರಾರು ಲೀಟರ್ ನೀರನ್ನು ಉಳಿಸಲು ಸಹಾಯ ಮಾಡುತ್ತಿದೆ.

ಇದುವರೆಗೆ ಇವರ ಈ ಮಾದರಿಯನ್ನು ರಾಷ್ಟ್ರಾದ್ಯಂತ 10000 ಕಡೆಗಳಲ್ಲಿ ಅನುಷ್ಠಾನಗೊಳಿಸಲಾಗಿದೆ. ಮುಂಬೈನಲ್ಲಿ ಮಳೆಗಾಲದಲ್ಲಿ ಸೃಷ್ಟಿಯಾಗುವ ನೆರೆಯನ್ನು ನಿವಾರಿಸಲು 6000 ಮಳೆನೀರು ಕೊಯ್ಲು ಅಳವಡಿಕೆಯ ಯೋಜನೆಯನ್ನು ಕೈಗೆತ್ತಿಕೊಂಡಿದ್ದಾರೆ.

ಮಿಷನ್ ಗ್ರೀನ್ ಮುಂಬೈನ ಸ್ಥಾಪಕರಾಗಿ, ಅವರು 2100 ಸ್ವಯಂಸೇವಕರೊಂದಿಗೆ ಹವಾಮಾನ ಮಾಲಿನ್ಯದ ವಿರುದ್ಧ ನಾಗರಿಕರ



ಚಳುವಳಿಯನ್ನು ಮುನ್ನಡೆಸುತ್ತಿದ್ದಾರೆ. ಜೊತೆಗೆ ಅಸ್ತಿತ್ವದಲ್ಲಿರುವ ಮರಗಳ ರಕ್ಷಣೆ ಮತ್ತು ಪೋಷಣೆ, ವೈಜ್ಞಾನಿಕ ರೀತಿಯಲ್ಲಿ ಹೊಸ ಸ್ಥಳೀಯ ಮರಗಳನ್ನು ನೆಡುವುದು ಮತ್ತು ಪ್ರಕೃತಿ ಸಂರಕ್ಷಣೆಯಲ್ಲಿ ನವೀನ ಯೋಜನೆಗಳ ಕುರಿತು ಜಾಗೃತಿ ಉಪಕ್ರಮಗಳು ಎಂಬ ಮೂರು ಪ್ರಮುಖ ಕ್ಷೇತ್ರಗಳ ಮೇಲೆ ಕೇಂದ್ರೀಕರಿಸಿದ್ದಾರೆ. ಇಲ್ಲಿಯವರೆಗೆ 82,000ಕ್ಕೂ ಹೆಚ್ಚು ಮರಗಳನ್ನು ನೆಡುವ ಮೂಲಕ, ಅವರು ಮುಂಬೈನ ಹಸಿರು ಹೊದಿಕೆಯನ್ನು ಹೆಚ್ಚಿಸಿದ್ದಾರೆ. ಇದು ಅವರಿಗೆ 'ಹಸಿರು ಮನುಷ್ಯ' ಎಂಬ ಬಿರುದನ್ನು ತಂದುಕೊಟ್ಟಿದೆ.

ಹೀಗೆ ಹೊಸ ಆಯಾಮದ ಆಲೋಚನೆಗಳಿಂದ ಪರಿಸರವನ್ನು ಸಂರಕ್ಷಿಸುವ ಯೋಜನೆಗಳನ್ನು ಮಾಡಿದ ಸುಭಾಜಿತ್ ಅವರ ಪ್ರಯತ್ನ ಶ್ಲಾಘನೀಯ. ನೀರನ್ನು ಉಳಿಸುವ ಇಂತಹ ಪ್ರಯತ್ನಗಳನ್ನು ಸ್ಥಾನೀಯವಾಗಿ, ಅಲ್ಲಿನ ಭೌಗೋಳಿಕ ರಚನೆಗೆ ಅನುಗುಣವಾಗಿ ಹೆಚ್ಚು ಹೆಚ್ಚು ಮಾಡಬೇಕೆನ್ನುವುದು ನಮ್ಮ ಆಶಯ. ನಮ್ಮ ಮನೆಯಲ್ಲಿ ನಾವು ದೈನಂದಿನ ಜೀವನದಲ್ಲಿ ಬಳಕೆ ಮಾಡುವ ನೀರು ಮಿತವಾಗಿರಲಿ. ನಲ್ಲಿಗಳಿಂದ ಪೋಲಾಗದಿರಲಿ. ಅದರ ಜೊತೆಗೆ ವ್ಯರ್ಥವಾಗಿ ಹರಿಯುತ್ತಿರುವ ನೀರನ್ನು ಸಂರಕ್ಷಿಸುವ ಪ್ರಯತ್ನಗಳು ಅಧಿಕವಾಗಲಿ.

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 25th JUNE 2025

REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2024-2026 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2024-26

FORTNIGHTLY 01-07-2025



## ಭಾರತದಿಂದ ಆಫ್ರಿಕಾಗೆ ರಫ್ತಾಗಲಿದೆ ರೂ. 3,000 ಕೋಟಿ ಮೌಲ್ಯದ 150 ಲೋಕೋಮೋಟಿವ್



ಭಾರತವು ಆಫ್ರಿಕನ್ ದೇಶವಾದ ಗಿನಿಯಾಗೆ ರೂ 3,000 ಕೋಟಿಗಿಂತ ಹೆಚ್ಚು ಮೌಲ್ಯದ 150 ಲೋಕೋಮೋಟಿವ್‌ಗಳನ್ನು ಪೂರೈಸಲಿದೆ ಎಂದು ರೈಲ್ವೆ ಸಚಿವಾಲಯ ತಿಳಿಸಿದೆ. ಮೇಕ್–ಇನ್–ಇಂಡಿಯಾ ಲೋಕೋಮೋಟಿವ್‌ಗಳನ್ನು ದೇಶದ ಸಿಮಂಡೋ ಕಬ್ಬಿಣದ ಅದಿರು ಯೋಜನಾ ಸ್ಥಳದಲ್ಲಿ ಬಳಸಲು ಉದ್ದೇಶಿಸಲಾಗಿದೆ ಎಂದು ಭಾರತೀಯ ರೈಲ್ವೆಯ ವಕ್ತಾರರು ತಿಳಿಸಿದ್ದಾರೆ. “ಬಿಹಾರದ ಮಾರ್ಹೌರಾದಲ್ಲಿರುವ ರೈಲ್ವೆ ಲೋಕೋಮೋಟಿವ್ ಕಾರ್ಖಾನೆಯು 150 ಎವಲ್ಯೂಷನ್ ಸರಣಿಯ ES43ACmi ಲೋಕೋಮೋಟಿವ್‌ಗಳನ್ನು ಪೂರೈಸಲಿದೆ. ಪ್ರಸ್ತುತ ಹಣಕಾಸು ವರ್ಷದಲ್ಲಿ ಮೂವತ್ತೇಳು ಲೋಕೋಮೋಟಿವ್‌ಗಳನ್ನು ರಫ್ತು ಮಾಡಲಾಗುವುದು, ಆದರೆ ಮುಂದಿನ ಹಣಕಾಸು ವರ್ಷದಲ್ಲಿ 82 ಲೋಕೋಮೋಟಿವ್‌ಗಳನ್ನು ರಫ್ತು ಮಾಡಲಾಗುವುದು. ಮೂರನೇ ವರ್ಷದಲ್ಲಿ ಇನ್ನೂ 31 ಲೋಕೋಮೋಟಿವ್‌ಗಳನ್ನು ರಫ್ತು ಮಾಡಲಾಗುವುದು” ಎಂದು ತಿಳಿಸಲಾಗಿದೆ. 4,500–HP ಲೋಕೋಮೋಟಿವ್‌ಗಳು ಪರ್ಯಾಯ ವಿದ್ಯುತ್ (AC) ಪ್ರೊಪಲ್ಷನ್, ಪುನರುತ್ಪಾದಕ ಬ್ರೇಕಿಂಗ್, ಮೈಕ್ರೊಪ್ರೊಸೆಸರ್–ಆಧಾರಿತ ನಿಯಂತ್ರಣಗಳು ಮತ್ತು ಮಾಡ್ಯುಲರ್ ಆರ್ಕಿಟೆಕ್ಚರ್‌ನೊಂದಿಗೆ ಸಜ್ಜುಗೊಂಡಿವೆ. “ಈ ಲೋಕೋಮೋಟಿವ್‌ಗಳನ್ನು ಅತ್ಯುತ್ತಮವಾದ ಹೊರಸೂಸುವಿಕೆ ಮಾನದಂಡಗಳು, ಅಗ್ನಿಶಾಮಕ ಪತ್ತೆ ವ್ಯವಸ್ಥೆಗಳು ಮತ್ತು ರೆಫ್ರಿಜರೇಟರ್, ಮೈಕ್ರೋವೇವ್ ಮತ್ತು ನೀರಿಲ್ಲದ ಶೌಚಾಲಯ ವ್ಯವಸ್ಥೆಯಂತಹ ಆಧುನಿಕ ಸೌಲಭ್ಯಗಳೊಂದಿಗೆ ದಕ್ಷತಾಶಾಸ್ತ್ರದ ಸಿಬ್ಬಂದಿ ಕ್ಯಾಬಿನ್‌ಗಳೊಂದಿಗೆ ನಿರ್ಮಿಸಲಾಗಿದೆ” ಎಂದಿದ್ದಾರೆ.

## ಇ–ಮತದಾನ ವ್ಯವಸ್ಥೆಯನ್ನು ಜಾರಿಗೆ ತರಲು ನಿರ್ಧರಿಸಿದ ಬಿಹಾರ




ಮತದಾನ ಪ್ರಕ್ರಿಯೆಗೆ ಒಂದು ಮಾದರಿ ಬದಲಾವಣೆ ಎಂಬಂತೆ, ಬಿಹಾರ ರಾಜ್ಯ ಚುನಾವಣಾ ಆಯೋಗವು ಆಂಡ್ರಾಯ್ಡ್ ಆಧಾರಿತ ಮೊಬೈಲ್ ಬಳಸಿ ಇ–ಮತದಾನ ವ್ಯವಸ್ಥೆಯನ್ನು ಜಾರಿಗೆ ತರಲು ನಿರ್ಧರಿಸಿದೆ. ಮತದಾನ ಪ್ರಕ್ರಿಯೆಯಲ್ಲಿ ಈ ಕ್ರಾಂತಿಕಾರಿ ಬದಲಾವಣೆಯನ್ನು ಅಳವಡಿಸಿಕೊಂಡ ದೇಶದ ಮೊದಲ ರಾಜ್ಯ ಬಿಹಾರವಾಗಲಿದೆ. ಬಿಹಾರ ರಾಜ್ಯ ಚುನಾವಣಾ ಆಯುಕ್ತ ದೀಪಕ್ ಪ್ರಸಾದ್ ಈ ಬಗ್ಗೆ ಮಾಹಿತಿ ನೀಡಿದ್ದು, ರಾಜ್ಯದಲ್ಲಿ ನಡೆಯಲಿರುವ ಮುಂಬರುವ ಪುರಸಭೆ ಮತ್ತು ನಗರ ಸಂಸ್ಥೆಗಳ ಚುನಾವಣೆಯೊಂದಿಗೆ ಈ ಉಪಕ್ರಮವು ಪ್ರಾರಂಭವಾಗಲಿದೆ ಎಂದು ಹೇಳಿದರು. ಸಂಪೂರ್ಣ ಇ–ಮತದಾನ ಪ್ರಕ್ರಿಯೆಯನ್ನು ಎರಡು ಮೊಬೈಲ್ ಅಪ್ಲಿಕೇಶನ್‌ಗಳ ಮೂಲಕ ಕಾರ್ಯಗತಗೊಳಿಸಲಾಗುವುದು, ಅವುಗಳೆಂದರೆ “ಇ–ಮತದಾನ SECBHR”, ಒಂದನ್ನು ಸೆಂಟರ್ ಫಾರ್ ಡೆವಲಪ್‌ಮೆಂಟ್ ಆಫ್ ಅಡ್ವಾನ್ಸ್ಡ್ ಕಂಪ್ಯೂಟಿಂಗ್ (C-DAC) ಮತ್ತು ಇನ್ನೊಂದು ಬಿಹಾರ ರಾಜ್ಯ ಚುನಾವಣಾ ಆಯೋಗ ಅಭಿವೃದ್ಧಿಪಡಿಸಿದೆ.

ಇಲ್ಲಿಯವರೆಗೆ 10,000 ಮತದಾರರು ಇ–ಮತದಾನಕ್ಕಾಗಿ ನೋಂದಾಯಿಸಿಕೊಂಡಿದ್ದಾರೆ ಮತ್ತು 50 ಸಾವಿರ ಮತದಾರರು ಇ–ಮತದಾನದ ಮೂಲಕ ಮತ್ತು ಮತಗಟ್ಟೆಗಳಿಗೆ ಭೇಟಿ ನೀಡದೆ ತಮ್ಮ ಮತದಾನದ ಹಕ್ಕನ್ನು ಚಲಾಯಿಸಲು ಸಾಧ್ಯವಾಗುತ್ತದೆ ಎಂದಿದ್ದಾರೆ. ಈ ಉಪಕ್ರಮದ ದೊಡ್ಡ ಪ್ರಯೋಜನವೆಂದರೆ ವಲಸೆ ಕಾರ್ಮಿಕರು, ವಲಸೆ ಮತದಾರರು, ದಿವ್ಯಾಂಗ ಮತದಾರರು, ಗರ್ಭಿಣಿ ಮಹಿಳಾ ಮತದಾರರು, ವೃದ್ಧರು ಮತ್ತು ಹಿರಿಯ ನಾಗರಿಕರು ಮತ್ತು ತೀವ್ರ ಅಸ್ವಸ್ಥ ಮತದಾರರು ಇ–ಮತದಾನ ಪ್ರಕ್ರಿಯೆಯನ್ನು ಬಳಸಿಕೊಂಡು ತಮ್ಮ ಮತ ಚಲಾಯಿಸಲು ಸಾಧ್ಯವಾಗುತ್ತದೆ. ಇದು ಮತದಾರರ ಮತದಾನವನ್ನು ಹೆಚ್ಚಿಸಲು ಮತ್ತು ಚುನಾವಣೆಗಳನ್ನು ಹೆಚ್ಚು ಒಳಗೊಳ್ಳುವಂತೆ ಮಾಡಲು ಸಹಾಯ ಮಾಡುತ್ತದೆ. ಇ–ಮತದಾನ ವ್ಯವಸ್ಥೆಯು ಬ್ಲಾಕ್‌ಚೈನ್ ಪ್ಲಾಟ್‌ಫಾರ್ಮ್, ಲೈವ್‌ನೆಸ್ ಡಿಟೆಕ್ಷನ್, ಫೇಸ್ ಮ್ಯಾಚ್, ಲೈವ್ ಫೇಸ್ ಸ್ಕ್ಯಾನ್ ಮತ್ತು ಫೇಸ್ ಹೋಲಿಕೆಯಂತಹ ವೈಶಿಷ್ಟ್ಯಗಳನ್ನು ಹೊಂದಿದ್ದು, ಮತದಾನವನ್ನು ಟ್ಯಾಂಪರ್‌ಪ್ರೂಫ್ ಮಾಡುತ್ತದೆ. ಇವಿಎಂಗಳ ವಿವಿಪ್ಯಾಟ್ ವೈಶಿಷ್ಟ್ಯದಂತೆ, ಇ–ಮತದಾನ ಪ್ರಕ್ರಿಯೆಯಲ್ಲಿ ಆಡಿಟ್ ಟ್ರಯಲ್ ಅನ್ನು ಸಹ ಜಾರಿಗೆ ತರಲಾಗಿದೆ.

ಮತದಾನ ಪ್ರಕ್ರಿಯೆಯಲ್ಲಿ ಎಂಡ್–ಟು–ಎಂಡ್ ಡಿಜಿಟಲ್ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವಲ್ಲಿ ಪ್ರವರ್ತಕವಾಗಿರುವ ಬಿಹಾರ ರಾಜ್ಯ ಚುನಾವಣಾ ಆಯೋಗದ ಕಿರೀಟದಲ್ಲಿ ಇ–ಮತದಾನವು ಮತ್ತೊಂದು ಗರಿಯಾಗಲಿದೆ. ರಾಜ್ಯ ಚುನಾವಣಾ ಆಯೋಗವು ಇಲ್ಲಿಯವರೆಗೆ ಮತದಾರರ ಪರಿಶೀಲನೆಗಾಗಿ ಎಫ್‌ಆರ್‌ಎಸ್ – ಮುಖ ಗುರುತಿಸುವಿಕೆ ವ್ಯವಸ್ಥೆ, ಮತಗಳ ಎಣಿಕೆ ಮತ್ತು ಫಲಿತಾಂಶಗಳ ಘೋಷಣೆಯಲ್ಲಿ ಆಪ್ಟಿಕಲ್ ಕ್ಯಾರೆಕ್ಟರ್ ರೆಕಗ್ನಿಷನ್ ವ್ಯವಸ್ಥೆ ಮತ್ತು ಇವಿಎಂ ಸ್ಟ್ರಾಂಗ್ ರೂಮ್‌ಗಳಿಗೆ ಡಿಜಿಟಲ್ ಲಾಕ್‌ಗಳ ಬಳಕೆಯನ್ನು ಪರಿಚಯಿಸಿದೆ, ಇದು ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ಇತರರಿಗೆ ಮಾದರಿಯಾಗಿದೆ. ಇ–ಮತದಾನ ಪ್ರಕ್ರಿಯೆಯ ಬಗ್ಗೆ ಲಭ್ಯವಿರುವ ಮಾಹಿತಿಯ ಪ್ರಕಾರ, ಯುರೋಪಿಯನ್ ರಾಷ್ಟ್ರವಾದ ಎಸ್ಟೋನಿಯಾ ಮಾತ್ರ ಇದನ್ನು ಜಾರಿಗೆ ತಂದಿದೆ.

## ಮಲಗುಂಡಿ ಸ್ವಚ್ಛತೆಗೆ ಮಾನವ ಬಳಕೆ ಸ್ಥಗಿತವಾಗಲಿ: ಹೈಕೋರ್ಟ್

ಮನುಷ್ಯರಿಂದ ಮಲ ಹೊರುವ ಪದ್ಧತಿ (ಮಲಗುಂಡಿಗಳ ಸ್ವಚ್ಛತೆ) ಮುಂದುವರೆಸುತ್ತಿರುವ ಕ್ರಮಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಹೈಕೋರ್ಟ್, ಈ ರೀತಿಯ ಕಾರ್ಯಗಳಿಗೆ ಮನುಷ್ಯರ ಬಳಕೆ ಮಾಡುವುದನ್ನು ಸಂಪೂರ್ಣ ಸ್ಥಗಿತಗೊಳಿಸಬೇಕು ಎಂದು ಸರಕಾರಕ್ಕೆ ತಾಕೀತು ಮಾಡಿದೆ. ಆಧುನಿಕ ಯಂತ್ರೋಪಕರಣಗಳಿದ್ದರೂ ಮಲ ಗುಂಡಿಗಳನ್ನು ಸ್ವಚ್ಛಗೊಳಿಸಲು ಮನುಷ್ಯರನ್ನು ಬಳಕೆ ಮಾಡುತ್ತಿರುವ ಕ್ರಮವನ್ನು ಪ್ರಶ್ನಿಸಿ ಆಲ್ ಇಂಡಿಯಾ ಸೆಂಟ್ರಲ್ ಕೌನ್ಸಿಲ್ ಆಫ್ ಟ್ರೇಡ್ ಯೂನಿಯನ್ಸ್ (ಎಐಸಿಸಿಟಿಯು)ನ ಕರ್ನಾಟಕ ಘಟಕ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಸಿದ ಹಂಗಾಮಿ ಮುಖ್ಯ ನ್ಯಾ. ವಿ.ಕಾಮೇಶ್ವರ ರಾವ್ ಮತ್ತು ನ್ಯಾಯಮೂರ್ತಿ ಸಿ.ಎಂ. ಜೋಶಿ ಅವರಿದ್ದ ನ್ಯಾಯಪೀಠ, ಸರಕಾರಕ್ಕೆ ಮೌಖಿಕವಾಗಿ ತಾಕೀತು ಮಾಡಿದೆ. ಅಲ್ಲದೇ, ರಾಜ್ಯದಲ್ಲಿ ಎಲ್ಲ ಕೈಗಾರಿಕಾ ಹಾಗೂ ಜನವಸತಿ ಪ್ರದೇಶಗಳ ಎಸ್‌ಟಿಪಿಗಳ ನಿರ್ವಹಣೆಗೆ ಸಂಬಂಧಿಸಿದಂತೆ ನಾಲ್ಕು ವಾರಗಳಲ್ಲಿ ಸಮಗ್ರ ಮಾಹಿತಿ ನೀಡುವಂತೆ ಸೂಚನೆ ನೀಡಿ ವಿಚಾರಣೆ ಮುಂದೂಡಿತು.

**ಶಾಸನಬದ್ಧ ಕಾರ್ಯವಿಧಾನ ಪರಿಚಯಿಸಿ:** ವಸತಿ ಸಮುಚ್ಚಯಗಳು ಪ್ರತ್ಯೇಕ ಎಸ್‌ಟಿಪಿಗಳನ್ನು ಹೊಂದಿದ್ದು, ಅವುಗಳ ಸ್ವಚ್ಛತೆಗೆ ಸಂಬಂಧಿಸಿದಂತೆ ಮಾರ್ಗಸೂಚಿಗಳು ಇಲ್ಲವೇ ಶಾಸನಬದ್ಧ ಕಾರ್ಯವಿಧಾನ ಪರಿಚಯಿಸಬೇಕು. ರಾಜ್ಯ ಸರಕಾರ ಈ ಬಗ್ಗೆ ಶೀಘ್ರದಲ್ಲಿ ಕ್ರಮಕ್ಕೆ ಮುಂದಾಗಬೇಕು. ಮಾನವನ ಬಳಕೆ ಕಡಿಮೆ ಮಾಡುವ ಮೂಲಕ ಸಾವನ್ನಪ್ಪಿವ ಘಟನೆಗಳು ಕಡಿಮೆಯಾಗುವಂತಾಗಬೇಕು ಎಂದು ಪೀಠ ಮೌಖಿಕವಾಗಿ ತಿಳಿಸಿತು. ಎಸ್‌ಟಿಪಿಗಳ ಮೇಲ್ವಿಚಾರಣಾ ವ್ಯವಸ್ಥೆ ಇರಬೇಕು. ಎಲ್ಲ ಇಲಾಖೆಗಳು ಚರ್ಚೆ ನಡೆಸಿ ಮಾಡಿದಲ್ಲಿ ಮಾತ್ರ ಸಾಧ್ಯವಾಗಲಿದೆ. ಜೊತೆಗೆ, ತರಬೇತಿ ಪಡೆದ ವ್ಯಕ್ತಿಗಳು ಈ ಕಾರ್ಯಕ್ಕೆ ಮುಂದಾಗುವುದಿಲ್ಲ. ಇದಕ್ಕೆ ಬದಲಾಗಿ ದಿನಗೂಲಿ ಮಾಡುವವರು ಮಾತ್ರ ಇಂತಹ ಕೃತ್ಯಗಳಿಗೆ ಬಲಿಯಾಗುತ್ತಿದ್ದಾರೆ ಎಂದು ಪೀಠ ತಿಳಿಸಿತು.

## ಜಗತ್ತಿನ ಟಾಪ್ ವಿವಿ ಪಟ್ಟಿಯಲ್ಲಿ ಭಾರತದ 54 ವಿವಿಗಳಿಗೆ ಸ್ಥಾನ

ಲಂಡನ್ ಮೂಲದ ಉನ್ನತ ಶಿಕ್ಷಣ ವಿಶ್ಲೇಷಣಾ ಸಂಸ್ಥೆ ಕ್ವಾಕ್ವರಲ್ಲಿ ಸೈಮಂಡ್ಸ್ (ಕ್ಯೂಎಸ್) 2025ನೇ ಸಾಲಿನ ಜಾಗತಿಕ ಅತ್ಯುತ್ತಮ ವಿವಿಗಳ ಪಟ್ಟಿ ಬಿಡುಗಡೆ ಮಾಡಿದ್ದು, ಭಾರತದ 54 ವಿವಿಗಳು ಸ್ಥಾನ ಪಡೆದುಕೊಂಡು ದಾಖಲೆ ನಿರ್ಮಿಸಿವೆ. ಈ ಮೂಲಕ ಅತ್ಯುತ್ತಮ ವಿವಿಗಳನ್ನು ಹೊಂದಿದ ದೇಶಗಳ ಪಟ್ಟಿಯಲ್ಲಿ ಭಾರತ 4ನೇ ಸ್ಥಾನ ಪಡೆದುಕೊಂಡಿದೆ. ಕ್ವಾಕ್ವರೆಲ್ಲಿ ಸೈಮಂಡ್ಸ್ (ಕ್ಯೂಎಸ್) ಲಂಡನ್ ಮೂಲದ ಜಾಗತಿಕ ಉನ್ನತ ಶಿಕ್ಷಣ ವಿಶ್ಲೇಷಣಾ ಸಂಸ್ಥೆಯಾಗಿದ್ದು, ಪ್ರತಿವರ್ಷ ಜಗತ್ತಿನ ಅತ್ಯುತ್ತಮ ವಿವಿಗಳನ್ನು ಗುರುತಿಸಿ ಪಟ್ಟಿ ಬಿಡುಗಡೆ ಮಾಡುತ್ತದೆ. ವಿವಿಗಳ ಶೈಕ್ಷಣಿಕ ಸಾಧನೆ, ವಿದ್ಯಾರ್ಥಿ–ಸಿಬ್ಬಂದಿ ಅನುಪಾತ, ಸಂಶೋಧನಾ ಪರಿಣಾಮ, ಅಂತಾರಾಷ್ಟ್ರೀಯ ವಿದ್ಯಾರ್ಥಿಗಳ ವೈವಿಧ್ಯ ಹಾಗೂ ಪದವೀಧರರಿಗೆ ಸಿಕ್ಕ ಉದ್ಯೋಗಾವಕಾಶ ಇತ್ಯಾದಿ ಮಾನದಂಡಗಳನ್ನು ಗುರುತಿಸಿ, ವಿವಿಗಳಿಗೆ ಶ್ರೇಯಾಂಕಗಳನ್ನು ನೀಡುತ್ತದೆ. 2025ನೇ ಸಾಲಿನ ಪಟ್ಟಿಯಲ್ಲಿ 1,500ಕ್ಕೂ ಅಧಿಕ ವಿವಿಗಳನ್ನು ಪರಿಗಣಿಸಲಾಗಿದೆ. ಮೆಸಾಚ್ಯುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಎಂಐಟಿ) ವಿಶ್ವದ ಅತ್ಯುತ್ತಮ ವಿವಿ ಎಂಬ ಹೆಗ್ಗಳಿಕೆ ಪಡೆದಿದೆ. ಕಳೆದ ವರ್ಷ ಭಾರತದ 46 ವಿವಿಗಳುಸ್ಥಾನ ಪಡೆದಿದ್ದವು. ಈ ವರ್ಷ ಇನ್ನೂ 8 ವಿವಿಗಳ ಸೇರ್ಪಡೆಯಾಗಿದ್ದು, ಸಂಖ್ಯೆ 54ಕ್ಕೇರಿದೆ. ಈ ಮೂಲಕ ಅತ್ಯುತ್ತಮ ವಿವಿ ಹೊಂದಿದ ಜಗತ್ತಿನ ರಾಷ್ಟ್ರಗಳ ಪಟ್ಟಿಯಲ್ಲಿ ಭಾರತ 4ನೇ ಸ್ಥಾನ ಪಡೆದುಕೊಂಡಿದೆ. ಕರ್ನಾಟಕದ 3 ವಿವಿಗಳೂ ಸ್ಥಾನ ಪಡೆದಿದೆ.

## ಯೋಗ ದಿನ: ಗಿನ್ನಿಸ್ ದಾಖಲೆ ನಿರ್ಮಿಸಿದ ಬುಡಕಟ್ಟು ವಿದ್ಯಾರ್ಥಿಗಳು

ಆಂಧ್ರಪ್ರದೇಶದ ವಿಶಾಖಪಟ್ಟಣದ ಆರ್‌ಕೆ ಬೀಚ್ ಕಾರಿಡಾರ್‌ನಲ್ಲಿ ನಡೆದ 2025ರ ಅಂತರರಾಷ್ಟ್ರೀಯ ಯೋಗ ದಿನಾಚರಣೆಯು ಅನೇಕ ದಾಖಲೆಗಳಿಗೆ ಸಾಕ್ಷಿಯಾಗಿದೆ. ಪ್ರಪಂಚದಾದ್ಯಂತ ಹಲವಾರು ದೇಶಗಳು ‘ಒಂದು ಭೂಮಿ, ಒಂದು ಆರೋಗ್ಯ’ ಎಂಬ ಘೋಷವಾಕ್ಯದಡಿ ಈ ವರ್ಷದ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಿದೆ. ವಿಶಾಖಪಟ್ಟಣದಲ್ಲಿ ಒಂದೇ ಸ್ಥಳದಲ್ಲಿ ಸುಮಾರು 3 ಲಕ್ಷಕ್ಕೂ ಅಧಿಕ ಜನರು ಯೋಗಾಸನದಲ್ಲಿ ಭಾಗವಹಿಸಿದ್ದಾರೆ. ಬುಡಕಟ್ಟು ಸಮುದಾಯಕ್ಕೆ ಸೇರಿದ 22,122 ವಿದ್ಯಾರ್ಥಿಗಳು ಏಕಕಾಲದಲ್ಲಿ 108 ನಿಮಿಷ ಸೂರ್ಯ ನಮಸ್ಕಾರ ಮಾಡುವ ಮೂಲಕ ಗಿನ್ನೆಸ್ ದಾಖಲೆ ಬರೆದಿದ್ದಾರೆ.



ಆಂಧ್ರಪ್ರದೇಶ ಸರ್ಕಾರ ‘ಯೋಗಾಂಧ್ರ’ ಎಂಬ ಒಂದು ತಿಂಗಳ ಅಭಿಯಾನವನ್ನು ಆರಂಭಿಸಿ ಯೋಗದ ಹುಟ್ಟು, ಇತಿಹಾಸದ ಮಾಹಿತಿ ಜತೆಗೆ ಯೋಗಾಭ್ಯಾಸದ ಕುರಿತು ಜನರಿಗೆ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಈ ಕಾರ್ಯಕ್ರಮದಲ್ಲಿ ನುರಿತ 5,451 ತರಬೇತುದಾರರು ಅರಿವು ಮೂಡಿಸುವುದರ ಜತೆಗೆ ಒಂದು ಕೋಟಿಗೂ ಹೆಚ್ಚು ಜನರಿಗೆ ಪ್ರಮಾಣ ಪತ್ರಗಳನ್ನು ನೀಡಿದ್ದಾರೆ.

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 87225 52497 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.